# ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ನಿರ್ದೇಶನಾಲಯ : ಯೋಜನೆಗಳು & ಕಾರ್ಯಕ್ರಮಗಳು

ಕೈಗಾರಿಕೀಕರಣದ ಬಗ್ಗೆ "ಮಹಾತ್ಮಗಾಂಧೀಜಿ ಯವರು ಒಂದು ಗುಂಡುಸೂಜಿಯಿಂದ ಹಿಡಿದು ವಿಮಾನದ ವರೆಗಿನ ಎಲ್ಲಾ ಉತ್ಪನ್ನಗಳನ್ನು ತಯಾರಿಕೆ ಮಾಡುವ ಕನಸು ಕಾಣಬೇಕು" ಎಂಬ ಹೇಳಿಕೆ ಹಾಗೂ ಇನ್ನೆಂದೆಡೆ ಡಾ:ಸರ್.ಎಂ.ವಿಶ್ವೇಶ್ವರಯ್ಯ ರವರ "ಕೈಗಾರಿಕೆ ಇಲ್ಲವೇ ವಿನಾಶ". "ಕೈಗಾರಿಕೆಯಿಂದಲೇ ಸರ್ವೋದಯದ ಕನಸು ಕಾಣಬಹುದು" ಆಗಲೇ ದೇಶದಲ್ಲಿ ನಿಜವಾದ ಕೈಗಾರಿಕೀಕರಣ ಎಂಬ ಹೇಳಿಕೆ ಇದೆ.

ಮೈಸೂರು ರಾಜ್ಯದಲ್ಲಿದ್ದ ಕೈಗಾರಿಕಾ ಚಟುವಟಿಕೆಗಳ ಮೇಲ್ವಿಚಾರಣೆ ಯನ್ನು ನೋಡಿಕೊಳ್ಳುತ್ತಿದ್ದಂತಹ ಸಲಹಾ ಸಮಿತಿಯ ರಾಜ್ಯದಲ್ಲಿ ಕೈಗಾರಿಕೆಗಳ ಸ್ಥಾಪನೆಗೆ ಒಂದು ಇಲಾಖೆಯನ್ನು ಸ್ಥಾಪನೆ ಮಾಡುವಂತೆ ಮೈಸೂರು ಸಂಸ್ಥಾನದ ಆಡಳಿತ ಮಂಡಳಿಗೆ ಶಿಫಾರಸ್ಸು ಮಾಡಿತು. ಅದರಂತೆ 1913ರ ಅಂತ್ಯದಲ್ಲಿ ಈ ಹಿಂದಿನ ಮೈಸೂರು ಸಂಸ್ಥಾನದ ಆಡಳಿತ ಅವಧಿಯಲ್ಲಿ ಇಲಾಖೆ ಜನ್ಮ ತಾಳಿತು. ಇಂದು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ನಿರ್ದೇಶನಾಲಯವು ನಿರುದ್ಯೋಗಿ ಯುವಕ ಯುವತಿಯರು ಸ್ವಯಂ ಉದ್ಯೋಗ ಕೈಗೊಳ್ಳಲು ಉತ್ತೇಜನ ನೀಡಲು ಈ ಕೆಳಗಿನ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ ಮತ್ತು ವಿವಿಧ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ನೀಡುತ್ತಿದೆ.

## ಪ್ರಧಾನಮಂತ್ರಿಯವರ ಉದ್ಯೋಗ ಸೃಜನ ಯೋಜನೆ

ನಗರ / ಗ್ರಾಮೀಣ ಭಾಗದ ನಿರುದ್ಯೋಗಿ ಯುವಕ / ಯುವತಿಯರು ಕಿರು ಕೈಗಾರಿಕೆಗಳನ್ನು ಸ್ಥಾಪಿಸುವ ಮೂಲಕ ಸ್ವಯಂ ಉದ್ಯೋಗವನ್ನು ಉತ್ತೇಜಿಸಲು ವಿವಿಧ ಹಣಕಾಸು ಸಂಸ್ಥೆಗಳ ಸಹಯೋಗದೊಂದಿಗೆ ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ, ಜಿಲ್ಲಾ ಕೈಗಾರಿಕಾ ಕೇಂದ್ರ ಮತ್ತು ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಮೂಲಕ ಸಾಲ ಮತ್ತು ಸಹಾಯಧನದ ನೆರವು ಒದಗಿಸುವ ಯೋಜನೆಯಾಗಿದೆ.

1. **ತಯಾರಿಕಾ ಮತ್ತು ಸೇವಾ ಚಟುವಟಿಕೆಗಳಿಗೆ ಗರಿಷ್ಠ ಯೋಜನ ವೆಚ್ಚ** : ಅನುಕ್ರಮವಾಗಿ ರೂ.25 ಲಕ್ಷ ಮತ್ತು ರೂ.10.00ಲಕ್ಷ

2. **ಶೈಕ್ಷಣಿಕ ವಿದ್ಯಾರ್ಹತೆ:** ರೂ.10 ಲಕ್ಷ ಮೇಲ್ಪಟ್ಟ ಯೋಜನಾ ವೆಚ್ಚದ ತಯಾರಿಕಾ / ರೂ.5 ಲಕ್ಷ ಮೇಲ್ಪಟ್ಟ ಯೋಜನಾ ವೆಚ್ಚದ ಸೇವಾ ಚಟುವಟಿಕೆಗಳಿಗೆ ಕನಿಷ್ಟ ವಿದ್ಯಾರ್ಹತೆ 8ನೇ ತರಗತಿ ಉತ್ತೀರ್ಣರಾಗಿರಬೇಕು.

3. **ವಯಸ್ಸು :** ಕನಿಷ್ಟ 18 ವರ್ಷ ತುಂಬಿರಬೇಕು,

4. **ಪ್ರವರ್ತಕರ ವಂತಿಕೆ & ಸರ್ಕಾರದಿಂದ ಸಹಾಯಧನ (ರೂ.ಲಕ್ಷಗಳಲ್ಲಿ)**

| ಫಲಾನುಭವಿಗಳ ವರ್ಗೀಕರಣ | ಯೋಜನಾ ವೆಚ್ಚದಲ್ಲಿ ಪ್ರವರ್ತಕರ ವಂತಿಗೆ | ಯೋಜನಾ ವೆಚ್ಚದ ಮೇಲೆ ಅರ್ಹತೆಯಿರುವ ಸಹಾಯಧನ | |
|---|---|---|---|
| | | ನಗರ | ಗ್ರಾಮೀಣ |
| ಸಾಮಾನ್ಯ ವರ್ಗ | ಶೇ.10% | ಶೇ. 15% (ಗರಿಷ್ಟ ರೂ.3.75 ಲಕ್ಷ) | ಶೇ. 25% (ಗರಿಷ್ಟ ರೂ.6.25 ಲಕ್ಷ) |
| ಪರಿಶಿಷ್ಟ ಜಾತಿ/ ಪರಿಶಿಷ್ಠ ಪಂಗಡ/ ಹಿಂದುಳಿದವರು/ ಅಲ್ಪಸಂಖ್ಯಾತರು/ ಮಹಿಳೆ/ ಮಾಜಿ ಯೋಧರು/ ಅಂಗವಿಕಲರು | ಶೇ.5% | ಶೇ. 25% (ಗರಿಷ್ಟ ರೂ.6.25 ಲಕ್ಷ) | ಶೇ. 35% (ಗರಿಷ್ಟ ರೂ.8.75 ಲಕ್ಷ) |

5. **ಚಟುವಟಿಕೆಗಳು:**
   ಅನರ್ಹ ಚಟುವಟಿಕೆಗಳನ್ನು ಹೊರತುಪಡಿಸಿ ಆರ್ಥಿಕವಾಗಿ ಸದೃಢವಾಗುವ ಎಲ್ಲಾ ತಯಾರಿಕಾ ಮತ್ತು ಸೇವಾ ಚಟುವಟಿಕೆಗಳು ಮಾತ್ರ ಈ ಯೋಜನೆಯಡಿಯಲ್ಲಿ ಸೌಲಭ್ಯ ಪಡೆಯಲು ಅರ್ಹವಾಗಿರುತ್ತವೆ.

6. **ಆದಾಯದ ಮಿತಿ:**
   ಈ ಯೋಜನೆಯಡಿಯಲ್ಲಿ ಉದ್ದಿಮೆಗಳನ್ನು ಸ್ಥಾಪಿಸಲು ಸಾಲ ಸೌಲಭ್ಯ ಪಡೆಯಲು ಯಾವುದೇ ಆದಾಯದ ಮಿತಿ ಇರುವುದಿಲ್ಲ.

7. **ಇತರೆ ಷರತ್ತುಗಳು:**
   ಈ ಯೋಜನೆಯಡಿಯಲ್ಲಿ ಪ್ರಥಮ ಪೀಳಿಗೆ ಉದ್ಯಮಶೀಲರುಗಳು ಪ್ರಾರಂಭಿಸುವ ಹೊಸ ಘಟಕಗಳಿಗೆ ಮಾತ್ರ ಸಹಾಯಧನ ಲಭ್ಯವಿದೆ. ವಿಸ್ತರಣೆ/ಆಧುನೀಕರಣ/ವೈವಿಧ್ಯಿಕರಣ ಘಟಕಗಳಿಗೆ ಈ ಯೋಜನೆಯ ಸೌಲಭ್ಯ ಪಡೆಯಲು ಅರ್ಹತೆ ಇರುವುದಿಲ್ಲ. ಇತರೆ ಯೋಜನೆಗಳಲ್ಲಿ ಸಾಲ ಮತ್ತಿತ್ತರ ಸೌಲಭ್ಯ ಪಡೆದ ಘಟಕಗಳು/ ಉದ್ಯಮಶೀಲರು ಈ ಯೋಜನೆಯಲ್ಲಿ ಸೌಲಭ್ಯ ಪಡೆಯಲು ಅರ್ಹತೆ ಇರುವುದಿಲ್ಲ.

8. **ಅನರ್ಹ ಚಟುವಟಿಕೆಗಳು:**
   1. ಮಾಂಸಾಧಾರಿತ ತಯಾರಿಕಾ / ಸೇವಾ ಘಟಕಗಳು (ಸಂಸ್ಕರಣೆ, ಕ್ಯಾನಿಂಗ್), ಬೀಡಿ, ಸಿಗಾರ್, ಪಾನ್ ಘಟಕಗಳು, ಮದ್ಯ ತಯಾರಿಕೆ / ತಂಬಾಕು ಬಳಕೆ ಆಧಾರಿಕ ಕೈಗಾರಿಕೆಗಳು
   2. ರೇಷ್ಮೆ ಕೃಷಿ, ತೋಟಗಾರಿಕೆ, ಪಶುಸಂಗೋಪನೆ (ಕೋಳಿಸಾಕಾಣಿಕೆ, ಹಂದಿ ಸಾಕಾಣಿಕೆ ಇತ್ಯಾದಿ), ಟೀ, ಕಾಫಿ, ಇತ್ಯಾದಿ ಪ್ಲಾಂಟೇಷನ್.
   3. 20 ಮೈಕ್ರಾನ್‌ಗಿಂತ ತೆಳ್ಳನೆಯ ಪ್ಲಾಸ್ಟಿಕ್ ಕ್ಯಾರಿಬ್ಯಾಗ್‌ಗಳ ತಯಾರಿಕೆ, ಪರಿಸರ ಮಾಲಿನ್ಯ ಮಾಡುವ ಇತರೆ ಉತ್ಪನ್ನಗಳ ತಯಾರಿಕೆ. ಪಾಶ್ಮಿನಾ ಉಣ್ಣೆ ಸಂಸ್ಕರಣೆ, ಗ್ರಾಮೀಣ ಸಾರಿಗೆ

## ಮುಖ್ಯ ಮಂತ್ರಿಗಳ ಸ್ವಯಂ ಉದ್ಯೋಗ ಸೃಜನ ಯೋಜನೆ

ಕರ್ನಾಟಕ ರಾಜ್ಯದ ನಿರುದ್ಯೋಗಿ ಯುವಕ / ಯುವತಿಯರು ಗ್ರಾಮೀಣ ಪ್ರದೇಶಗಳಲ್ಲಿ ಕಿರು ಕೈಗಾರಿಕೆಗಳನ್ನು ಸ್ಥಾಪಿಸುವ ಮೂಲಕ ಸ್ವಯಂ ಉದ್ಯೋಗವನ್ನು ಉತ್ತೇಜಿಸಲು ವಿವಿಧ ಹಣಕಾಸು ಸಂಸ್ಥೆಗಳ ಸಹಯೋಗದೊಂದಿಗೆ ಜಿಲ್ಲಾ ಕೈಗಾರಿಕಾ ಕೇಂದ್ರಗಳ ಮತ್ತು ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಮೂಲಕ ಸಾಲ ಮತ್ತು ಸಹಾಯಧನದ ನೆರವು.

1. **ತಯಾರಿಕಾ ಮತ್ತು ಸೇವಾ ಚಟುವಟಿಕೆಗಳಿಗೆ ಗರಿಷ್ಠ ಯೋಜನ ವೆಚ್ಚ** : ರೂ.10.00ಲಕ್ಷ

2. **ಶೈಕ್ಷಣಿಕ ವಿದ್ಯಾರ್ಹತೆ:** ಈ ಯೋಜನೆಯಡಿಯಲ್ಲಿ ಯೋಜನಾ ವೆಚ್ಚ ರೂ.5.00 ಲಕ್ಷ ಮತ್ತು ಅದಕ್ಕಿಂತ ಮೇಲ್ಪಟ್ಟ ಯೋಜನೆಗಳನ್ನು ಸ್ಥಾಪಿಸಲು ಅಭ್ಯರ್ಥಿಗಳು ಕನಿಷ್ಠ ವಿದ್ಯಾರ್ಹತೆ 8ನೇ ತರಗತಿ ಉತ್ತೀರ್ಣರಾಗಿರಬೇಕು.

3. **ವಯಸ್ಸು :** ಕನಿಷ್ಠ 18 ವರ್ಷ ತುಂಬಿರಬೇಕು, ಗರಿಷ್ಠ 35 ವರ್ಷ ಸಾಮಾನ್ಯ ವರ್ಗದವರಿಗೆ ಗರಿಷ್ಠ 45 ವರ್ಷ ವಿಶೇಷ ವರ್ಗದವರಿಗೆ (ಪ.ಜಾತಿ/ ಪ.ಪಂಗಡ/ ಹಿಂದುಳಿದ ವರ್ಗ/ ಅಲ್ಪಸಂಖ್ಯಾತರು/ ಅಂಗವಿಕಲರು/ ಮಾಜಿಸೈನಿಕ/ ಮಹಿಳೆ)

4. **ಪ್ರವರ್ತಕರ ವಂತಿಕೆ:**
ಸಾಮಾನ್ಯ ವರ್ಗದ ಉದ್ಯಮಶೀಲರು ಯೋಜನಾ ವೆಚ್ಚದ ಶೇ 10% ರಷ್ಟು ಬಂಡವಾಳವಾಗಿ ತೊಡಗಿಸಬೇಕು. ಉದ್ಯಮಶೀಲರು ಪ.ಜಾತಿ/ ಪ.ಪಂಗಡ / ಹಿಂದುಳಿದ ವರ್ಗ/ ಅಲ್ಪಸಂಖ್ಯಾತ /ಮಾಜಿ ಸೈನಿಕ / ಅಂಗವಿಕಲ/ ಮಹಿಳೆ ಆಗಿದ್ದಲ್ಲಿ ಯೋಜನಾ ವೆಚ್ಚದ ಶೇ 5% ರಷ್ಟು ಬಂಡವಾಳ ತೊಡಗಿಸಬೇಕು.

5. **ಸರ್ಕಾರದಿಂದ ಸಹಾಯಧನ (ರೂ.ಲಕ್ಷಗಳಲ್ಲಿ)**

| ಫಲಾನುಭವಿಗಳ ವರ್ಗೀಕರಣ | ಯೋಜನಾ ವೆಚ್ಚದಲ್ಲಿ ಪ್ರವರ್ತಕರ ವಂತಿಗೆ | ಯೋಜನಾ ವೆಚ್ಚದ ಮೇಲೆ ಅರ್ಹತೆಯಿರುವ ಸಹಾಯಧನ |
|---|---|---|
| ಸಾಮಾನ್ಯ ವರ್ಗ | ಶೇ.10% | ಶೇ. 25% (ಗರಿಷ್ಠ ರೂ. 2.50 ಲಕ್ಷ) |
| ವಿಶೇಷ (ಪ.ಜಾತಿ/ಪ.ಪಂಗಡ/ ಹಿಂದುಳಿದವರು/ ಅಲ್ಪಸಂಖ್ಯಾತರು/ ಮಹಿಳೆ/ ಮಾಜಿ ಯೋಧರು/ ಅಂಗವಿಕಲರು) | ಶೇ.5% | ಶೇ. 35% (ಗರಿಷ್ಠ ರೂ. 3.50 ಲಕ್ಷ) |

6. **ಚಟುವಟಿಕೆಗಳು:**
ಆರ್ಥಿಕವಾಗಿ ಸದೃಢವಾಗುವ ಎಲ್ಲಾ ತಯಾರಿಕಾ ಮತ್ತು ಸೇವಾ ಚಟುವಟಿಕೆಗಳು ಮಾತ್ರ ಈ ಯೋಜನೆಯಡಿಯಲ್ಲಿ ಸೌಲಭ್ಯ ಪಡೆಯಲು ಅರ್ಹವಾಗಿರುತ್ತವೆ. (ಪಿ.ಎಂ.ಇ.ಜಿ.ಪಿ ಯೋಜನೆಯ ನಿಷೇಧಿತ ಪಟ್ಟಿಯಲ್ಲಿನ ಚಟುವಟಿಕೆಗಳು ಮತ್ತು ಕೈಗಾರಿಕಾ ನೀತಿ 2014-19 ರಲ್ಲಿನ ನಿಷೇಧಿತ ಪಟ್ಟಿಯಲ್ಲಿನ ಕೆಲವು ಚಟುವಟಿಕೆಗಳನ್ನು ಹೊರತುಪಡಿಸಿದೆ.)

7. **ಆದಾಯದ ಮಿತಿ:**
ಈ ಯೋಜನೆಯಡಿಯಲ್ಲಿ ಉದ್ದಿಮೆಗಳನ್ನು ಸ್ಥಾಪಿಸಲು ಸಾಲ ಸೌಲಭ್ಯ ಪಡೆಯಲು ಯಾವುದೇ ಆದಾಯದ ಮಿತಿ ಇರುವುದಿಲ್ಲ.

8. **ಇತರೆ ಷರತ್ತುಗಳು:**
ಈ ಯೋಜನೆಯಡಿಯಲ್ಲಿ ಪ್ರಥಮ ಪೀಳಿಗೆ ಉದ್ಯಮಶೀಲರುಗಳು ಪ್ರಾರಂಭಿಸುವ ಹೊಸ ಘಟಕಗಳಿಗೆ ಮಾತ್ರ ಸಹಾಯಧನ ಲಭ್ಯವಿದೆ. ವಿಸ್ತರಣೆ/ ಆಧುನೀಕರಣ/ ವೈವಿಧ್ಯಿಕರಣ ಘಟಕಗಳಿಗೆ ಈ ಯೋಜನೆಯ ಸೌಲಭ್ಯ ಪಡೆಯಲು ಅರ್ಹತೆ ಇರುವುದಿಲ್ಲ.ಇತರೆ ಯೋಜನೆಗಳಲ್ಲಿ ಅಥವಾ ಪ್ರಧಾನಮಂತ್ರಿಯವರ ಉದ್ಯೋಗ ಸೃಜನೆ ಯೋಜನೆಯಡಿಯಲ್ಲಿ ಸಾಲ ಮತ್ತಿತ್ತರ ಸೌಲಭ್ಯ ಪಡೆದ ಘಟಕಗಳು/ ಉದ್ಯಮಶೀಲರು ಈ ಯೋಜನೆಯಲ್ಲಿ ಸೌಲಭ್ಯ ಪಡೆಯಲು ಅರ್ಹತೆ ಇರುವುದಿಲ್ಲ.

## ಕುಶಲಕರ್ಮಿಗಳಿಗೆ ವಿಶೇಷ ಗೃಹ ನಿರ್ಮಾಣ ಯೋಜನೆಯಡಿ ನಿರ್ಮಿಸಲಾಗುವ ವಸತಿ ಕಾರ್ಯಾಗಾರಗಳು:

- ಈ ಯೋಜನೆಯನ್ನು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಹಾಗೂ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ, ಬೆಂಗಳೂರು ರವರ ಸಹಯೋಗದೊಂದಿಗೆ ಅನುಷ್ಠಾನಗೊಳಿಸಲಾಗುವುದು.

**ಅರ್ಹತೆ:**

- ಅರ್ಜಿದಾರರು ಕುಶಲಕರ್ಮಿಯಾಗಿರಬೇಕು.
- ಅರ್ಜಿದಾರರು ಸರ್ಕಾರದ ಯಾವುದೇ ಇತರೆ ಯೋಜನೆಗಳಡಿಯಲ್ಲಿ ವಸತಿ ಸೌಕರ್ಯವನ್ನು ಪಡೆದಲ್ಲದಿರುವ ಹಾಗೂ ಸ್ವಂತ ಮನೆ ಹೊಂದಿಲ್ಲದಿರುವ ಬಡತನ ರೇಖೆಗಿಂತ ಕೆಳಗಿರುವ ಕುಶಲಕರ್ಮಿಗಳು ಅರ್ಹರಾಗಿರುತ್ತಾರೆ.
- ಅರ್ಜಿದಾರರು ಗ್ರಾಮೀಣ ಅಥವಾ ನಗರ ಪ್ರದೇಶದ ವಾಸಿಯಾಗಿದ್ದು, ಗ್ರಾಮೀಣ ಪ್ರದೇಶದಲ್ಲಿನ ವಾಸಿಯ ವಾರ್ಷಿಕ ಆದಾಯ ರೂ.30,000/- ಗಿಂತ ಕಡಿಮೆ ಹಾಗೂ ನಗರ ಪ್ರದೇಶದ ವಾಸಿಯ ವಾರ್ಷಿಕ ಆದಾಯ ರೂ.87,600/- ಗಿಂತ ಕಡಿಮೆ ಇರಬೇಕು.
- ಈ ಯೋಜನೆಯಡಿ ನಿರ್ಮಿಸುವ ಪ್ರತಿ ವಸತಿ ಕಾರ್ಯಾಗಾರದ ನಿರ್ಮಾಣ ವೆಚ್ಚ: ರೂ.2.50 ಲಕ್ಷ.

- ಈ ಯೋಜನೆಯಡಿ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಿಂದ ಪ್ರತಿ ಕುಶಲಕರ್ಮಿಗೆ ರೂ.1.00 ಲಕ್ಷ ಸಹಾಯಧನ.
- ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ, ಬೆಂಗಳೂರು ರವರಿಂದಪ್ರತಿ ಕುಶಲಕರ್ಮಿಗೆ ರೂ.1.20 ಲಕ್ಷ ಸಹಾಯಧನ.
- ಆಯ್ಕೆಯಾದ ಕುಶಲಕರ್ಮಿ ಫಲಾನುಭವಿ ವಂತಿಕೆ ರೂ.30,000/- ಗಳನ್ನು ನಿರ್ಮಾಣಕ್ಕೆ ಹೂಡುವುದು.
- ಜಿಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಯುವ ಜಿಲ್ಲಾ ಆಯ್ಕೆ ಸಮಿತಿಯ ಮುಖಾಂತರ ಆಯ್ಕೆಯಾಗಿ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ, ಬೆಂಗಳೂರು ರವರಿಂದ ಅನುಮೋದನೆಗೊಂಡ ಫಲಾನುಭವಿಗೆ ನಿರ್ಮಾಣದ ಪ್ರಗತಿಯನ್ನು ಆಧರಿಸಿ ನಿಗಮದಿಂದ ನೇರವಾಗಿ ಫಲಾನುಭವಿಗಳ ಖಾತೆಗೆ ಅನುದಾನ ವರ್ಗಾಯಿಸಲಾಗುವುದು.
- ಸಂಭಂದಪಟ್ಟ ಜಿಲ್ಲೆಯ ಜಿಲ್ಲೆಗಳ ಜಿಲ್ಲಾ ಕೈಗಾರಿಕಾ ಕೇಂದ್ರಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗುವುದು.
- ವೈಯಕ್ತಿಕ ವಸತಿ ಕಾರ್ಯಾಗಾರದ ವಿಧ:
  - ಟೈಪ್ ಡಿಸೈನ್ – "ಎ" – ಆರ್.ಸಿ.ಸಿ ಮೇಲ್ಚಾವಣಿ = 300 ಚದರ ಅಡಿ.
  - ಟೈಪ್ ಡಿಸೈನ್ – "ಬಿ" – ಎ.ಸಿ.ಸಿ ಮೇಲ್ಚಾವಣಿ = 400 ಚದರ ಅಡಿ.
  - ಕುಶಲಕರ್ಮಿಯು ಪಡೆಯುವ ಒಟ್ಟು ಸಹಾಯಧನದ ನಾಲ್ಕು ಪಟ್ಟು ಮಿತಿಯೊಳಗೆ ಹಾಗೂ ಗರಿಷ್ಠ 700 ಚದರ ಅಡಿ ವರೆವಿಗೆ ವಿಸ್ತರಿಸಲು ನಿಯಮಾನುಸಾರ ಅವಕಾಶವಿದೆ.
- **ವಸತಿ ಕಾರ್ಯಾಗಾರದ ವೈಶಿಷ್ಟ್ಯ:**

  ವಾಸಿಸಲು ಕೊಠಡಿ, ಕೆಲಸ ನಿರ್ವಹಿಸಲು ಕಾರ್ಯಾಗಾರ, ಅಡಿಗೆ ಕೋಣೆ, ಸ್ನಾನದ ಕೊಠಡಿ, ಶೌಚಾಲಯ ಒಳಗೊಂಡಿರುವುದು ಕಡ್ಡಾಯ.

## ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಉದ್ಯಮಶೀಲರಿಗಿರುವ ಯೋಜನೆಗಳು :

### 1. ಆಧುನೀಕರಣ / ತಾಂತ್ರಿಕ ತರಬೇತಿ

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ನಿರುದ್ಯೋಗಿ ಯುವ ಜನರಿಗೆ ಇಲಾಖೆ ವತಿಯಿಂದ ಸ್ಥಾಪಿತವಾದ/ಪ್ರಾಯೋಜಿತವಾದ ಕೌಶಲ್ಯಾಭಿವೃದ್ದಿ ತರಬೇತಿ ಕೇಂದ್ರಗಳ ಮೂಲಕ ಕೈಗಾರಿಕೆಗೆ ಅವಶ್ಯಕತೆ ಇರುವ ಮಾನವ ಸಂಪನ್ಮೂಲ ಒದಗಿಸಲು ಉದ್ಯೋಗಾವಕಾಶ ಕಲ್ಪಿಸಲು ಹಾಗೂ ಸ್ವಯಂ ಉದ್ಯೋಗ ಸ್ಥಾಪನೆಗಾಗಿ ಕೌಶಲ್ಯಾಭಿವೃದ್ದಿ ತರಬೇತಿಯನ್ನು ನೀಡಲಾಗುವುದು.

- **ವಿದ್ಯಾರ್ಹತೆ ಮತ್ತು ವಯಸ್ಸು:** ಎಸ್‌ಎಸ್‌ಎಲ್‌ಸಿ ಉತ್ತೀರ್ಣ/ ಅನುತ್ತೀರ್ಣ ,ಕನಿಷ್ಟ 16 ವರ್ಷ ಗರಿಷ್ಟ 45 ವರ್ಷ
- **ತರಬೇತಿಯ ಅವಧಿ:** 03, 04 ಮತ್ತು 6 ತಿಂಗಳು
- **ತರಬೇತಿ ಶಿಷ್ಯವೇತನ:** **ಮಾಹೆಯಾನ ರೂ.2500.00**

### 2. ಕುಶಲಕರ್ಮಿಗಳಿಗೆ ವಸತಿ ಕಾರ್ಯಾಗಾರಗಳ ಸೌಲಭ್ಯ ಕಾರ್ಯಕ್ರಮ:

ಸರ್ಕಾರದಿಂದ ಯಾವುದೇ ಯೋಜನೆಯಡಿಯಲ್ಲಿ ವೃತ್ತಿನಿರತ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಕುಶಲಕರ್ಮಿಗಳಿಗೆ ವಸತಿ ಕಾರ್ಯಾಗಾರಗಳ ಸೌಲಭ್ಯಗಳನ್ನು ಪಡೆಯದೇ ಇರುವ ವಸತಿರಹಿತ ಕುಶಲಕರ್ಮಿಗಳಿಗೆ ಕೆಳಕಂಡ ವೃತ್ತಿಗಳಲ್ಲಿ ನಿರಂತರವಾಗಿ ತೊಡಗಿದವರನ್ನು ಮಾತ್ರ ಆಯ್ಕೆ ಮಾಡಲಾಗುವುದು

| ಸಂ. | ವೃತ್ತಿಯ ಹೆಸರು | ಸಂ. | ವೃತ್ತಿಯ ಹೆಸರು |
|---|---|---|---|
| 01 | ಬಿದಿರು ಕೆಲಸ | 07 | ಜನರಲ್ ಇಂಜಿನಿಯರಿಂಗ್ |
| 02 | ಬೆತ್ತದ ಕೆಲಸ | 08 | ಚಾಪೆ ಹೆಣೆಯುವುದು |
| 03 | ಬಡಗಿ ಕೆಲಸ | 09 | ಬುಟ್ಟಿ ಹೆಣೆಯುವುದು |
| 04 | ಕಮ್ಮಾರಿಕೆ | 10 | ತೆಂಗಿನ ನಾರಿನ ಉತ್ಪನ್ನ ತಯಾರಿಕೆ |
| 05 | ಚರ್ಮ ವಸ್ತುಗಳ ತಯಾರಿಕೆ | 11 | ಕುಂಬಾರಿಕೆ |
| 06 | ಕರಕುಶಲ ವಸ್ತು ತಯಾರಿಕೆ, ಟೈಲರಿಂಗ್ ಹೊರತುಪಡಿಸಿ | | |

ಫಲಾನುಭವಿಗಳನ್ನು ಗುರುತಿಸಿ ಅವರಿಂದ ಪಡೆಯುವ ದಾಖಲಾತಿಗಳು. ಜಾತಿ ಪ್ರಮಾಣ ಪತ್ರ, ನಿವೇಶನ ಹಕ್ಕು ಪತ್ರ, ವೃತ್ತಿ ದೃಢೀಕರಣ ಪತ್ರ ಪಡೆಯುವುದು

**ವಸತಿ ಕಾರ್ಯಾಗಾರದ ಯೋಜನಾ ವೆಚ್ಚದ ವಿವರ:**
ವಸತಿ ಕಾರ್ಯಾಗಾರ ಯೋಜನೆಯಡಿ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಪ್ರತಿ ಘಟಕದ ವೆಚ್ಚ ಅನುಕ್ರಮವಾಗಿ ರೂ.3.00 ಲಕ್ಷ ಮತ್ತು ರೂ.3.25 ಲಕ್ಷಗಳನ್ನು ನಿಗದಿಪಡಿಸಲಾಗಿದೆ. ಇದರಲ್ಲಿ ರಾಜೀವ್ ಗಾಂಧಿ ಗ್ರಾಮೀಣ ನಿಗಮದ ಮೂಲಕ ಕ್ರಮವಾಗಿ ರೂ.1.75 ಲಕ್ಷ ಮತ್ತು ರೂ.2.00 ಲಕ್ಷ ಭರಿಸಲಾಗುವುದು. ರೂ.1.00 ಲಕ್ಷ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಸಹಾಯಧನ ಮತ್ತು ಫಲಾನುಭವಿಗಳು ಶೇ.10 ಭರಿಸಬೇಕಾಗಿರುತ್ತದೆ.

## 3. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ / ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ ರವರುಗಳಿಂದ ಹಂಚಿಕೆಯಾಗುವ ನಿವೇಶನ/ಪ್ಲಾಟ್/ಶೆಡ್‌ಗಳಿಗೆ ರಿಯಾಯಿತಿ.

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದ ಉದ್ದಿಮೆದಾರರಿಗೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ/ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮಗಳಿಂದ ಹಂಚಿಕೆಯಾಗುವ ಕೈಗಾರಿಕಾ ನಿವೇಶನ/ಪ್ಲಾಟ್/ಶೆಡ್‌ಗಳನ್ನು ಶೇ.50 ರಷ್ಟು ರಿಯಾಯಿತಿ ದರದಲ್ಲಿ ನೀಡಲಾಗುತ್ತಿದೆ. ಇನ್ನುಳಿದ ಶೇ.50 ರ ದರದಲ್ಲಿ ಮೊದಲಿಗೆ ಶೇ.25 ರಷ್ಟು ಮೊತ್ತವನ್ನು ಪಾವತಿಸಿ, ಇನ್ನುಳಿದ ಮೊತ್ತವನ್ನು 8 ತ್ರೈಮಾಸಿಕ ಸಮ ಕಂತುಗಳಲ್ಲಿ ಭರಿಸಬೇಕಾಗುವುದು. ಶೇ.50 ರಷ್ಟು ರಿಯಾಯಿತಿ ಮೊತ್ತವನ್ನು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಿಂದ ಎಸ್‌ಸಿಪಿ/ಟಿಎಸ್‌ಪಿ ಯೋಜನೆಯಡಿ ಕೆಐಎಡಿಬಿ/ಕೆಎಸ್‌ಎಸ್‌ಐಡಿಸಿ ರವರಿಗೆ ಮರುಪಾವತಿ ಮಾಡಲಾಗುವುದು. ಗರಿಷ್ಟ 2 ಎಕರೆ ಜಮೀನನ್ನು ರಿಯಾಯಿತಿ ದರದಲ್ಲಿ ನೀಡಲು ಪರಿಗಣಿಸಲಾಗುವುದು.

## 4. ಗುಡಿ ಮತ್ತು ಸೂಕ್ಷ್ಮ ಕೈಗಾರಿಕಾ ಘಟಕಗಳು / ಕುಶಲಕರ್ಮಿಗಳಿಗೆ ಬ್ಯಾಂಕಿನ ಸಾಲದ ಮೇಲೆ ಸಹಾಯಧನ ಕಾರ್ಯಕ್ರಮ

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಫಲಾನುಭವಿಗಳು ಗುಡಿ ಮತ್ತು ಅತೀ ಸೂಕ್ಷ್ಮ ಕೈಗಾರಿಕಾ ಘಟಕಗಳ ಸ್ಥಾಪನೆಗೆ ಹಣಕಾಸು ಸಂಸ್ಥೆಗಳಿಂದ ಸಾಲದ ಮಂಜೂರಾತಿ ಪಡೆದ ನಂತರ ಇಲಾಖೆಯಿಂದ ಈ ಯೋಜನೆಯಡಿ ಅರ್ಹ ಸಹಾಯಧನ ಮಂಜೂರು ಮಾಡಿ, ಸಾಲದ ಮೊದಲನೇ ಕಂತು ಬಿಡುಗಡೆಯಾದ ಮೇಲೆ ಸದರಿ ಸಹಾಯಧನ ಮೊತ್ತವನ್ನು ಸಂಬಂಧಪಟ್ಟ ಬ್ಯಾಂಕ್/ಹಣಕಾಸು ಸಂಸ್ಥೆಗಳಿಗೆ ಬಿಡುಗಡೆ ಮಾಡಲಾಗುವುದು.

**ಅರ್ಹತೆ:**

- ಘಟಕವನ್ನು ಪ್ರಾರಂಭಿಸುವ ಉದ್ದಿಮೆದಾರರು ಕನಿಷ್ಠ 18 ವರ್ಷ ವಯೋಮಾನ ಪೂರೈಸಿರಬೇಕು
- ಹೊಸ/ವಿಸ್ತರಣಾ/ಆಧುನೀಕರಣ ಘಟಕಗಳಿಗೆ ಈ ಯೋಜನೆಯಡಿ ಸಹಾಯಧನ ದೊರಕುವುದು.
- ಘಟಕಗಳು ಕೈಗಾರಿಕಾ ಅಥವಾ ಸೇವಾ ಚಟುವಟಿಕೆಯಡಿ ಕೈಗಾರಿಕೆ ಸ್ಥಾಪಿಸುವುದು.
- ಕೈಗಾರಿಕಾ ಅಥವಾ ಸೇವಾ ಚಟುವಟಿಕೆಗಳ ಸ್ಥಾಪನೆಗೆ ಯೋಜನಾ ವೆಚ್ಚದ ಮೇಲೆ ಮಂಜೂರಾಗುವ ಸಾಲದ ಆಧಾರದ ಮೇಲೆ ಸಹಾಯಧನ ಮಂಜೂರು ಮಾಡಲಾಗುವುದು.
- ಫಲಾನುಭವಿಯು ಈ ಹಿಂದೆ ಸಾಲ ಪಡೆದು ಸುಸ್ತಿದಾರರಾಗಿರತಕ್ಕದ್ದಲ್ಲ.
- ಫಲಾನುಭವಿಯು ಸರ್ಕಾರದ ಇತರ ಯಾವುದೇ ಯೋಜನೆಯಡಿ ರಿಯಾಯಿತಿ / ಪ್ರೋತ್ಸಾಹ ಪಡೆದಿರತಕ್ಕದ್ದಲ್ಲ.

**ವಿಶೇಷ ಸೂಚನೆ:** ಕೇವಲ ದುಡಿಮೆ ಬಂಡವಾಳ ಪಡೆದ ಘಟಕಗಳು ಈ ಯೋಜನೆಯಡಿ ಸಹಾಯಧನ ಪಡೆಯಲು ಅರ್ಹರಿರುವುದಿಲ್ಲ.

**ಸಲ್ಲಿಸಬೇಕಾದ ದಾಖಲಾತಿಗಳ ವಿವರಗಳು.**

| | |
|---|---|
| 1. ನಿಗದಿತ ನಮೂನೆಯಲ್ಲಿ ಅರ್ಜಿ | 2. ಎಸ್‌ಸಿ/ಎಸ್‌ಟಿ ಜಾತಿ ಪ್ರಮಾಣ ಪತ್ರ |
| 3. ಭೂಮಿ/ನಿವೇಶನದ ದಾಖಲಾತಿ ಪತ್ರ | 4. ಕಟ್ಟಡ ಬಾಡಿಗೆ ಇದ್ದಲ್ಲಿ ಬಾಡಿಗೆ ಕರಾರು ಪತ್ರ |
| 5. ಬ್ಯಾಂಕಿನಿಂದ ಸಾಲ ಮಂಜೂರಾದ ಪತ್ರ | 6. ಇಲಾಖೆಯಿಂದ ಪಡೆದಿರುವ ಉದ್ಯೋಗ್ ಆಧಾರ್ ಮೆಮೊರಾಂಡಮ್ |
| 7. ಯೋಜನಾ ಸ್ಥೂಲ ವರದಿ | |

**ಅರ್ಹ ಸಹಾಯಧನ ಮೊತ್ತ:**

- ಪ್ರವರ್ತಕರು ಯೋಜನಾ ವೆಚ್ಚದ ಶೇ.10 ರಷ್ಟನ್ನು ಭರಿಸಬೇಕು.
- ಯೋಜನಾ ವೆಚ್ಚದ ಶೇ.90 ರಷ್ಟನ್ನು ಹಣಕಾಸು ಸಂಸ್ಥೆ / ವಾಣಿಜ್ಯ ಬ್ಯಾಂಕ್‌ಗಳು, ಸಹಕಾರ ಬ್ಯಾಂಕ್‌ಗಳು, ರೀಜನಲ್ ರೂರಲ್ ಬ್ಯಾಂಕ್ (ಪತ್ತಿನ ಸಹಕಾರ ಸಂಘಗಳನ್ನು ಹೊರತುಪಡಿಸಿ) ಗಳಿಂದ ಯೋಜನೆಗೆ ಪಡೆಯುವುದು.
- ಹಣಕಾಸು ಸಂಸ್ಥೆ/ವಾಣಿಜ್ಯ ಬ್ಯಾಂಕ್‌ಗಳು, ಸಹಕಾರ ಬ್ಯಾಂಕ್‌ಗಳು, ರೀಜನಲ್ ರೂರಲ್ ಬ್ಯಾಂಕ್‌ಗಳಿಂದ (ಪತ್ತಿನ ಸಹಕಾರ ಸಂಘಗಳನ್ನು ಹೊರತುಪಡಿಸಿ) ಮಂಜೂರಾದ ಸಾಲದ ಮೇಲೆ, ಇಲಾಖೆ ವತಿಯಿಂದ ರೂ.10.00ಲಕ್ಷ ಮೀರದಂತೆ ಇರುವ ಯೋಜನೆಗಳಿಗೆ ಯೋಜನಾ ವೆಚ್ಚದ ಮೇಲೆ ಶೇ.60 ರಷ್ಟು ಗರಿಷ್ಟ ರೂ.5.00 ಲಕ್ಷಗಳವರೆಗೂ ಸಹಾಯಧನವನ್ನು ಮಂಜೂರು ಮಾಡಲಾಗುವುದು.

**ಆಯ್ಕೆ ವಿಧಾನ:**
ದಾಖಲಾತಿಗಳನ್ನು ಘಟಕಗಳಿಂದ ಪಡೆದು **ಸಹಾಯಧನ ಮಂಜೂರು** ಸಮಿತಿಯು ಆಗಿಂದಾಗ್ಗೆ ಸಭೆ ಸೇರಿ ಪರಿಶೀಲಿಸಿ ಅರ್ಹ ಪ್ರಸ್ತಾವನೆಗಳನ್ನು ಸಹಾಯಧನ ಮಂಜೂರು ಮಾಡಿ ಸಂಬಂಧಪಟ್ಟ ಹಣಕಾಸು ಸಂಸ್ಥೆ/ ಬ್ಯಾಂಕ್‌ಗಳಿಗೆ ಸಹಾಯಧನವನ್ನು ಬಿಡುಗಡೆ ಮಾಡಲು ಕಳುಹಿಸಲಾಗುವುದು.

**ಸಹಾಯಧನ ಬಿಡುಗಡೆ ವಿಧಾನ:**

- ಜಂಟಿ ನಿರ್ದೇಶಕರು ಸಂಬಂಧಪಟ್ಟ ಹಣಕಾಸು ಸಂಸ್ಥೆ/ಬ್ಯಾಂಕ್‌ಗಳಲ್ಲಿ ಫಲಾನುಭವಿಯ ಹೆಸರಿನಲ್ಲಿ ಪ್ರತ್ಯೇಕವಾಗಿ 2 ವರ್ಷಗಳ ಅವಧಿಗೆ ಠೇವಣಿ ಇಡಲಾಗುವುದು.

- ಘಟಕವು 2 ವರ್ಷದ ಅವಧಿಯೊಳಗೆ ಕಾರ್ಯಾರಂಭಗೊಂಡು ಚಾಲ್ತಿ ಇದ್ದಲ್ಲಿ, ಸದರಿ ಸಹಾಯಧನ ಮೊತ್ತವನ್ನು ಫಲಾನುಭವಿಯ ಸಾಲದ ಖಾತೆಗೆ ಹೊಂದಾಣಿಕೆ (Back end Subsidy) ಮಾಡಲಾಗುವುದು.
- ಘಟಕವು 2 ವರ್ಷದ ಅವಧಿಯೊಳಗೆ ಕಾರ್ಯಾರಂಭಗೊಂಡು ಚಾಲ್ತಿ ಇಲ್ಲದೇ ಇದ್ದಲ್ಲಿ ಈಗಾಗಲೇ ಹಣಕಾಸು ಸಂಸ್ಥೆ/ಬ್ಯಾಂಕಿನಲ್ಲಿ ಠೇವಣಿ ಇಟ್ಟಿರುವ ಸಹಾಯಧನವನ್ನು ಸಂಬಂಧಪಟ್ಟ ಹಣಕಾಸು ಸಂಸ್ಥೆ/ಬ್ಯಾಂಕ್‌ನಿಂದ ಸರ್ಕಾರಕ್ಕೆ ಮರುಪಾವತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತದೆ.

## 5. ಕೌಶಲ್ಯಾಭಿವೃದ್ಧಿ ತರಬೇತಿ ಕೇಂದ್ರ/ಸಾಮಾನ್ಯ ಸೌಲಭ್ಯ ಕೇಂದ್ರಗಳ ಸ್ಥಾಪನೆ ಕಾರ್ಯಕ್ರಮಕ್ಕೆ ಪಾಲಿಸಬೇಕಾದ ಮಾರ್ಗಸೂಚಿಗಳು

ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಗಳು ಸ್ಥಾಪಿಸುವ ಕೈಗಾರಿಕಾ ಸಂಘ / ಸಂಸ್ಥೆ / ಟ್ರಸ್ಟ್ ಅಥವಾ  ಶೇಕಡ 51 ಕ್ಕಿಂತ ಹೆಚ್ಚು ಇರುವ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಸದಸ್ಯರನ್ನು ಒಳಗೊಂಡ ಇತರೆ ಸಂಘ/ ಸಂಸ್ಥೆಗಳಿಗೆ ಕೌಶಲ್ಯಾಭಿವೃದ್ಧಿ ತರಬೇತಿ ಕೇಂದ್ರಗಳನ್ನು / ಸಾಮಾನ್ಯ ಸೌಲಭ್ಯ ಕೇಂದ್ರಗಳ  ಸ್ಥಾಪನೆಗೆ ಸಂಬಂಧಪಟ್ಟಂತೆ ಕಟ್ಟಡ ನಿರ್ಮಾಣ ಮತ್ತು ಯಂತ್ರೋಪಕರಣ / ಉಪಕರಣಗಳ ಖರೀದಿಗೆ ಅನುದಾನವನ್ನು ನೀಡಲಾಗುವುದು.

**ಸಂಘ ಸಂಸ್ಥೆಗಳ ಅರ್ಹತೆ/ಆಯ್ಕೆ ಮಾನದಂಡ:**

- ಸಂಘ / ಸಂಸ್ಥೆಗಳು ಕೋ-ಆಪರೇಟಿವ್ ಸೊಸೈಟಿ, ಕಾಯ್ದೆ 1957 / ಸೊಸೈಟಿ ರಿಜಿಸ್ಟ್ರೇಷನ್ ಕಾಯ್ದೆ 1960 ಅಥವಾ ಟ್ರಸ್ಟ್ ಕಾಯಿದೆಯಂತೆ ನೊಂದಣಿಯಾಗಿರತಕ್ಕದ್ದು.
- ಈ ಯೋಜನೆಯಡಿ ಸೌಲಭ್ಯ ಪಡೆಯಲು ಸಂಘ ಸಂಸ್ಥೆ /ಟ್ರಸ್ಟ್ ನಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಸದಸ್ಯರುಗಳು ಶೇ.50 ಕ್ಕಿಂತ ಹೆಚ್ಚು ಇರತಕ್ಕದ್ದು.
- ಸಂಘ / ಸಂಸ್ಥೆಯಿಂದ ಕೌಶಲ್ಯಾಭಿವೃದ್ಧಿ ತರಬೇತಿ ಕೇಂದ್ರ / ಸಾಮಾನ್ಯ ಸೌಲಭ್ಯ ಕೇಂದ್ರವನ್ನು  ಸ್ಥಾಪಿಸಲು ಸ್ವಂತ ಭೂಮಿ / ನಿವೇಶನವನ್ನು ಕಡ್ಡಾಯವಾಗಿ ಹೊಂದಿರತಕ್ಕದ್ದು.
- ಸಂಘ / ಸಂಸ್ಥೆಗಳು ತನ್ನ ಬೈ-ಲಾದಲ್ಲಿ ಕೈಗಾರಿಕೆಗೆ ಸಂಬಂಧಿಸಿದಂತೆ ಕೌಶಲ್ಯಾಭಿವೃದ್ಧಿ ತರಬೇತಿ ನೀಡುವ ಬಗ್ಗೆ ಉದ್ದೇಶಗಳನ್ನು ಹೊಂದಿರಬೇಕು.
- ಸಂಘ / ಸಂಸ್ಥೆಗಳು ಸ್ಥಾಪನೆಯಾಗಿ ಕನಿಷ್ಠ 2 ವರ್ಷ ಆಗಿರಬೇಕು. ತರಬೇತಿ ಹಾಗೂ ಇತರೆ ಚಟುವಟಿಕೆಗಳಲ್ಲಿ ಕಡ್ಡಾಯವಾಗಿ ತೊಡಗಿಕೊಂಡಿರಬೇಕು.

**ಸಂಘ ಸಂಸ್ಥೆಗಳು ನೀಡಬೇಕಾದ ದಾಖಲಾತಿಗಳು:**

- ಭೂಮಿ/ನಿವೇಶನದ ದಾಖಲಾತಿ
- ಸಂಘ/ಸಂಸ್ಥೆಗಳು ಸಂಬಂಧಪಟ್ಟ ಕಾಯಿದೆಯಡಿ ನೋಂದಣಿ ಮಾಡಿಕೊಂಡಿರುವ ಬಗ್ಗೆ ದಾಖಲಾತಿ ಇತ್ಯಾದಿ
- ಸಂಘದ ಬೈ-ಲಾ ಪ್ರತಿ
- ಈಗಾಗಲೇ ತರಬೇತಿ ನೀಡಿರುವ ಬಗ್ಗೆ ವರದಿ
- ಸಂಬಂಧಪಟ್ಟ ವಿದ್ಯುತ್ ಸರಬರಾಜು ಕಂಪನಿಗಳಿಂದ ವಿದ್ಯುಚ್ಛಕ್ತಿ ಸರಬರಾಜು ಮಂಜೂರಾತಿ ಪತ್ರದ ಪ್ರತಿ ಕಟ್ಟಡದ ನಿರ್ಮಾಣ ಮಾಡಲು ಸಕ್ಷಮ ಪ್ರಾಧಿಕಾರದಿಂದ ಪಡೆದಿರುವ ಅನುಮೋದನೆ ದಾಖಲಾತಿ / ನಕ್ಷೆ ಇತ್ಯಾದಿ

**ಯೋಜನೆಯಡಿ ಅನುದಾನದ ಮಿತಿ:**
ಕೌಶಲ್ಯಾಭಿವೃದ್ಧಿ ತರಬೇತಿ ಕೇಂದ್ರ/ಸಾಮಾನ್ಯ ಸೌಲಭ್ಯ ಕೇಂದ್ರಗಳ ಸ್ಥಾಪನೆಗೆ ಯೋಜನಾ ವೆಚ್ಚದ ಮೇಲೆ ಶೇ. 60 ರಷ್ಟು ಅಥವಾ ಗರಿಷ್ಠ ರೂ.20.00 ಲಕ್ಷಗಳವರೆವಿಗೂ ಈ ಕೆಳಕಂಡಂತೆ ಅನುದಾನ ಪಡೆಯಲು ಅರ್ಹವಿರುತ್ತದೆ.

**ಕಟ್ಟಡ ನಿರ್ಮಾಣ:** ಕಟ್ಟಡದ ವೆಚ್ಚದ ಶೇಕಡ 60 ರಷ್ಟು ಅಥವಾ ಗರಿಷ್ಠ ರೂ.12.00 ಲಕ್ಷಗಳವರೆಗೂ ಕಟ್ಟಡ ನಿರ್ಮಾಣಕ್ಕೆ ಅನುದಾನ ನೀಡಲಾಗುವುದು. ಉಳಿದ ಕಟ್ಟಡದ ವೆಚ್ಚವನ್ನು ಸಂಸ್ಥೆಯೇ ಸಂಪೂರ್ಣವಾಗಿ ಭರಿಸುವುದು.

**ಯಂತ್ರೋಪಕರಣ / ಉಪಕರಣಗಳ ಖರೀದಿಗೆ:** ಯಂತ್ರೋಪಕರಣ / ಉಪಕರಣಗಳ ವೆಚ್ಚದ ಶೇ. 60 ರಷ್ಟು ಅಥವಾ ಗರಿಷ್ಠ ರೂ.8.00 ಲಕ್ಷಗಳವರೆಗೂ ಯಂತ್ರೋಪಕರಣ/ಉಪಕರಣಗಳ ಖರೀದಿಗೆ ಅನುದಾನ ನೀಡಲಾಗುವುದು.  ಉಳಿದ ಯಂತ್ರೋಪಕರಣಗಳ ವೆಚ್ಚವನ್ನು ಸಂಸ್ಥೆಯೇ ಭರಿಸುವುದು.

**ಸಂಸ್ಥೆಯು ಪಾಲಿಸಬೇಕಾದ ಇತರ ನಿಬಂಧನೆಗಳು**

- ಸಂಘ/ಸಂಸ್ಥೆಯ ತರಬೇತಿ ಕೇಂದ್ರ ಕಟ್ಟಡ ಹಾಗೂ ಯಂತ್ರೋಪಕರಣ/ ಉಪಕರಣಗಳಿಗೆ ಸ್ವಂತ ಮೂಲಗಳಿಂದ ಶೇ.40 ರಷ್ಟು ಬಂಡವಾಳ ಭರಿಸಿದಲ್ಲಿ ಸದರಿ ಆಸ್ತಿಯ ಮೇಲೆ ಮೊದಲನೇ ಚಾರ್ಜನ್ನು ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಗೆ ನೀಡಬೇಕು.
- ಸಂಘ/ಸಂಸ್ಥೆಯು ಹಣಕಾಸು ಸಂಸ್ಥೆ / ಬ್ಯಾಂಕುಗಳಿಂದ ಸಾಲ ಪಡೆದಿದ್ದಲ್ಲಿ ಈ ಆಸ್ತಿಯ ಮೇಲೆ ಎರಡನೇ ಚಾರ್ಜನ್ನು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಗೆ ನೀಡತಕ್ಕದ್ದು.

- ಕೌಶಲ್ಯಾಭಿವೃದ್ಧಿ ತರಬೇತಿ ಕೇಂದ್ರ/ ಸಾಮಾನ್ಯ ಸೌಲಭ್ಯ ಕೇಂದ್ರ ಸ್ಥಾಪನೆಯಾದ ನಂತರ ಕನಿಷ್ಟ 10 ವರ್ಷಗಳ ಸತತವಾಗಿ ಗುಣ ಮಟ್ಟದ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳತಕ್ಕದ್ದು ಹಾಗೂ ಈ ಸಂಬಂಧ MOU ಮಾಡತಕ್ಕದ್ದು.
- ತರಬೇತಿ ಪಡೆದ ಅಭ್ಯರ್ಥಿಗಳಿಗೆ ಸ್ವಯಂ ಉದ್ಯೋಗ/ಉದ್ಯೋಗಾವಕಾಶ ಕಡ್ಡಾಯವಾಗಿ ಕಲ್ಪಿಸತಕ್ಕದ್ದು.
- ಉಪಕರಣಗಳ ಖರೀದಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಹಾಗೂ ಅದರಡಿ ರೂಪಿಸಿರುವ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

## 6. ಸಣ್ಣ /ಅತಿ ಸಣ್ಣ ಕೈಗಾರಿಕೆಗಳಿಗೆ "ಸಿ" "ಡಿ" ಮಾದರಿಯ ಮಳಿಗೆಯ ವೆಚ್ಚದ ಮೇಲೆ ರಿಯಾಯಿತಿ ದರದಲ್ಲಿ ಹಂಚಿಕೆ ಮಾಡುವ ಕಾರ್ಯಕ್ರಮ.

ಸಣ್ಣ ಅತೀ ಸಣ್ಣ ಕೈಗಾರಿಕೆ ಸ್ಥಾಪಿಸಲು ಶೇ.90ರಷ್ಟು ರಿಯಾಯಿತಿ ದರದಲ್ಲಿ "ಸಿ" ಮತ್ತು "ಡಿ" ಮಾದರಿಯ ಮಳಿಗೆಗಳನ್ನು ಕೆಎಸ್ಎಸ್ಐಡಿಸಿ ವತಿಯಿಂದ ಕೈಗಾರಿಕಾ ವಸಾಹಾತುವಿನಲ್ಲಿ ನಿರ್ಮಾಣ ಮಾಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಉದ್ಯಮಶೀಲರಿಗೆ ಕೈಗಾರಿಕಾ ಸ್ಥಾಪನೆಗಾಗಿ ಹಂಚಿಕೆ ಮಾಡಲಾಗುವುದು.

**ಯೋಜನೆಯ ರೂಪುರೇಷೆ :**

- ಕೆಎಸ್ಎಸ್ಐಡಿಸಿ ರವರ ವಸಾಹಾತುವಿನಲ್ಲಿ ಪ್ರತ್ಯೇಕವಾಗಿ ಕನಿಷ್ಟ 326.00 ಚ.ಮೀ ನಿವೇಶನಗಳನ್ನು ನಿರ್ಮಿಸಿ 170 ಚ.ಮೀ ವಿಸ್ತೀರ್ಣದ "ಸಿ" ಮಾದರಿಯ ಮಳಿಗೆಯನ್ನು ಹಾಗೂ ಕನಿಷ್ಟ 150 ಚ.ಮೀ ನಿವೇಶನಗಳನ್ನು ನಿರ್ಮಿಸಿ 92 ಚ.ಮೀ ವಿಸ್ತೀರ್ಣದ "ಡಿ" ಮಾದರಿಯ ಮಳಿಗೆಯನ್ನು ಹಂಚಿಕೆ ಮಾಡಲಾಗುವುದು.
- ನಿವೇಶನದ ಬೆಲೆಯನ್ನು ಒಳಗೊಂಡಂತೆ ಮಳಿಗೆಯ ನಿರ್ಮಾಣ ವೆಚ್ಚದ ಶೇ.90ರಷ್ಟು ರಿಯಾಯಿತಿಯನ್ನು ಸರ್ಕಾರದ ವತಿಯಿಂದ ಹಾಗೂ ಉಳಿದ ಶೇ.10ರಷ್ಟು ನಿರ್ಮಾಣ ವೆಚ್ಚವನ್ನು ಕೆಎಸ್ಎಸ್ಐಡಿಸಿ ಸಂಸ್ಥೆಯು ಭರಿಸಿ ಮಳಿಗೆ ನಿರ್ಮಾಣ ಕಾಮಗಾರಿಗಳನ್ನು ಪೂರ್ಣಗೊಳಿಸುವುದು.

**ಮಳಿಗೆಗಳ ಹಂಚಿಕೆ ವಿಧಾನ:**

- ಫಲಾನುಭವಿಯು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಕ್ಕೆ ಸೇರಿರತಕ್ಕದ್ದು.
- ಫಲಾನುಭವಿಯು ಕೈಗಾರಿಕಾ ಅಥವಾ ಸೇವಾ ಚಟುವಟಿಕೆಯಡಿ ಕೈಗಾರಿಕೆಯನ್ನು ಸ್ಥಾಪಿಸುವುದು.
- ಕೆಎಸ್ಎಸ್ಐಡಿಸಿ ಸಂಸ್ಥೆಯು ಇಲಾಖೆಯಿಂದ ನೀಡುವ ಶೇ.90 ರಷ್ಟು ರಿಯಾಯಿತಿ ಜೊತೆಗೆ ಉದ್ದಿಮೆದಾರರ ಪಾಲಿನ ವಂತಿಗೆಯನ್ನು (ಶೇ.10 ರಷ್ಟು ಮಾತ್ರ) ಜಿಲ್ಲಾ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಯಲ್ಲಿ ಮಂಡಿಸಿ, ಅನುಮೋದನೆ ಪಡೆದು ಮಳಿಗೆ ಹಂಚಿಕೆ ಮಾಡಲಾಗುವುದು.
- ಮಳಿಗೆ ಹಂಚಿಕೆಯಾದ 2 ವರ್ಷದೊಳಗೆ ಕೈಗಾರಿಕೆಯನ್ನು ಪ್ರಾರಂಭಿಸಲು ಸೂಕ್ತ ಕ್ರಮ ತೆಗೆದುಕೊಳ್ಳದೇ ಇದ್ದಲ್ಲಿ, ಹಂಚಿಕೆಯನ್ನು ರದ್ದುಗೊಳಿಸಿ ಇತರೇ ಅರ್ಹ ಪರಿಶಿಷ್ಟ ಪಂಗಡಗಳ ಫಲಾನುಭವಿಗೆ ಹಂಚಿಕೆ ಮಾಡಲು ಕ್ರಮ ಕೈಗೊಳ್ಳುವುದು.
- ಈಗಾಗಲೇ ಮಳಿಗೆಯ ವೆಚ್ಚವನ್ನು ನಿರ್ಧರಿಸಿದ್ದು, ಫಲಾನುಭವಿಯು ಶೇಕಡ 10 ರಷ್ಟನ್ನು ಮಾತ್ರ ಕೆಎಸ್ಎಸ್ಐಡಿಸಿ ಗೆ ಪಾವತಿಸಿ, ಮಳಿಗೆಯ ಸ್ವಾಧೀನವನ್ನು ಪಡೆಯುವುದು.
- ನಿವೇಶನದ ಮೊತ್ತವನ್ನು ಪ್ರತ್ಯೇಕವಾಗಿ ಫಲಾನುಭವಿಯು ಭರಿಸಬೇಕಾಗುವುದು.

## 7. ಅತೀ ಸಣ್ಣ/ಸಣ್ಣ ಕೈಗಾರಿಕಾ ಘಟಕಗಳಿಗೆ ಸಾಫ್ಟ್ ಸೀಡ್ ಕ್ಯಾಪಿಟಲ್ ಆರ್ಥಿಕ ಸಹಾಯ

ಈ ಯೋಜನೆಯಡಿ ಪ.ಜಾ/ಪ.ಪಂ. ಉದ್ಯಮಿದಾರರು ಬ್ಯಾಂಕ್/ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದು ಸ್ಥಾಪಿಸುವ ಹೊಸ/ಆಧುನೀಕರಣ/ತಾಂತ್ರಿಕ ಉನ್ನತೀಕರಣ/ವಿಸ್ತರಣೆ/ಚಟುವಟಿಕೆ ಬದಲಾವಣೆ ಘಟಕಗಳಿಗೆ ಯೋಜನಾ ವೆಚ್ಚದಲ್ಲಿ The Debt Equity Ratio 2:1 ಪ್ರಕಾರ (2/3 ರಷ್ಟು ಬ್ಯಾಂಕ್/ ಹಣಕಾಸು ಸಂಸ್ಥೆಗಳಿಂದ ಸಾಲ ಮತ್ತು 1/3 ಪ್ರವರ್ತಕರ ಬಂಡವಾಳ) ಘಟಕಕ್ಕೆ ಪ್ರವರ್ತಕ ಬಂಡವಾಳ ಹೂಡಿಕೆಯ 1/3 ರಲ್ಲಿ ಶೇ.50 ರಷ್ಟು ಬಡ್ಡಿ ರಹಿತ ಸಾಫ್ಟ್ ಸೀಡ್ ಕ್ಯಾಪಿಟಲ್ ಆರ್ಥಿಕ ಸಹಾಯ ನೀಡಲಾಗುವುದು

**ಅರ್ಹ ಸಹಾಯಧನ ಮೊತ್ತ:**

ಸ್ಥಾವರ ಮತ್ತು ಯಂತ್ರೋಪಕರಣಗಳ ಮೇಲೆ ಹೂಡಿದ ಬಂಡವಾಳವು ರೂ.5.00 ಕೋಟಿಗೊಳಪಡುವ ಘಟಕಕ್ಕೆ – ಡೆಟ್ ಈಕ್ವಿಟಿ 2:1 ರಂತೆ, ಪ್ರವರ್ತಕರ ಬಂಡವಾಳ ಗರಿಷ್ಟ ರೂ.75.00ಲಕ್ಷ ಸಾಫ್ಟ್ ಸೀಡ್ ಕ್ಯಾಪಿಟಲ್ ಆರ್ಥಿಕ ಸಹಾಯ ನೀಡಲಾಗುವುದು.

**ಮಂಜೂರಾತಿ ಸಮಿತಿ:**

ಪರಿಶೀಲನಾ ಸಭೆಯಲ್ಲಿ ಶಿಫಾರಸ್ಸಾದ ಘಟಕಗಳಿಗೆ ವಿವರವಾಗಿ ಪರಿಶೀಲಿಸಿದ ನಂತರ ಮಂಜೂರಾತಿ ಸಮಿತಿ ಸಭೆಯಲ್ಲಿ ಸಾಫ್ಟ್ ಸೀಡ್ ಕ್ಯಾಪಿಟಲ್ ಆರ್ಥಿಕ ಸಹಾಯ ಮಂಜೂರಾತಿ ಮಾಡಲಾಗುವುದು.

**ಅರ್ಹತೆ:**

- ಪ.ಜಾ/ಪ.ಪಂ. ಉದ್ದಿಮೆದಾರರು ಮಾಲಿಕತ್ವ/ ಪಾಲುದಾರಿಕೆ/ ಟ್ರಸ್ಟ್/ ಸಂಘ/ ಕಂಪನಿಗಳಲ್ಲಿ ಸ್ಥಾಪಿಸುವ ಘಟಕಗಳಲ್ಲಿ ಎಲ್ಲಾ ಪಾಲುದಾರರು/ ಸದಸ್ಯರು/ ನಿರ್ದೇಶಕರು ಪ.ಜಾ/ಪ.ಪಂ. ವರ್ಗಕ್ಕೆ ಸೇರಿರತಕ್ಕದ್ದು.
- ಹೊಸ ಹಾಗೂ ಹಾಲಿ ಕಾರ್ಯ ನಿರ್ವಹಿಸುತ್ತಿರುವ ಅತಿ ಸಣ್ಣ ಮತ್ತು ಸಣ್ಣ ಕೈಗಾರಿಕಾ ಘಟಕಗಳು ಹೊಸ/ಆಧುನೀಕರಣ/ತಾಂತ್ರಿಕ ಉನ್ನತೀಕರಣ/ ವಿಸ್ತೀರ್ಣ/ಚಟುವಟಿಕೆ ಬದಲಾವಣೆ ಮಾಡಿದಲ್ಲಿ ಸಾಫ್ಟ್ ಸೀಡ್ ಕ್ಯಾಪಿಟಲ್ ಆರ್ಥಿಕ ಸಹಾಯ ಪಡೆಯಬಹುದಾಗಿದೆ.
- ಹೊಸ ಹಾಗೂ ಹಾಲಿ ಕಾರ್ಯ ನಿರ್ವಹಿಸುತ್ತಿರುವ ಅತಿ ಸಣ್ಣ ಮತ್ತು ಸಣ್ಣ ಸೇವಾ ಘಟಕಗಳು ಸ್ಥಿರಾಸ್ತಿ ಮೇಲೆ ಬಂಡವಾಳ ಹೂಡಿದಲ್ಲಿ ಸಹಾಯ ಪಡೆಯಲು ಅರ್ಹರಾಗುತ್ತಾರೆ.

**ಸಂಬಂಧಪಟ್ಟ ಜಿಲ್ಲಾ ಕೈಗಾರಿಕಾ ಕೇಂದ್ರದ ಮೂಲಕ ಈ ಕೆಳಕಂಡ ದಾಖಲೆಗಳನ್ನು ಸಲ್ಲಿಸುವುದು:**

- ನಿಗಧಿತ ನಮೂನೆಯಲ್ಲಿ ಅರ್ಜಿ
- ಉದ್ಯೋಗ ಆಧಾರ್ ಮೆಮೋರಾಂಡಮ್
- ಗೆಜೆಟೆಡ್ ಅಧಿಕಾರಿಯಿಂದ ದೃಢೀಕರಿಸಿದ ಜಾತಿ ಪ್ರಮಾಣ ಪತ್ರದ ಪ್ರತಿ
- ಬ್ಯಾಂಕ್/ಹಣಕಾಸು ಸಂಸ್ಥೆಗಳಿಂದ ಸಾಲ ಮಂಜೂರಾತಿ ಪತ್ರ ಮತ್ತು ಅಪ್ರೈಸಲ್ ವರದಿಯ ಪ್ರತಿಗಳು
- ಮೊದಲನೇ ಕಂತಿನ ಸಾಲ ಬಿಡುಗಡೆ ಬಗ್ಗೆ ದಾಖಲಾತಿ

**ಸಾಫ್ಟ್ ಸೀಡ್ ಕ್ಯಾಪಿಟಲ್ ಸಹಾಯ ಮರುಪಾವತಿ ವಿಧಾನ:**

- ಸಾಫ್ಟ್ ಸೀಡ್ ಕ್ಯಾಪಿಟಲ್ ಸಹಾಯ ಮೊತ್ತವು ಬಡ್ಡಿರಹಿತ ಸಾಲವಾಗಿರುತ್ತದೆ.
- ಮರುಪಾವತಿಗೆ ಬಾಕಿ ಇರುವ ಮೊತ್ತದ ಮೇಲೆ ಶೇ.1 ರಷ್ಟು ಸೇವಾ ಶುಲ್ಕವನ್ನು ಸಂಬಂಧಪಟ್ಟ ಬ್ಯಾಂಕ್/ಹಣಕಾಸು ಸಂಸ್ಥೆ ಯವರು ಸಂಬಂಧಪಟ್ಟ ಘಟಕಗಳಿಗೆ ವಿಧಿಸುವುದು.
- ಸಾಲ ಬಿಡುಗಡೆ ಮಾಡಿದ ದಿನಾಂಕ ದಿಂದ 04 ವರ್ಷಗಳವರೆಗೂ Moratorium ಅವಧಿಯಾಗಿರುತ್ತದೆ. ನಂತರ 5 ವರ್ಷಗಳಲ್ಲಿ 20 ತ್ರೈಮಾಸಿಕ ಸಮ ಕಂತುಗಳಲ್ಲಿ ಈ ಸಾಲವನ್ನು ಮರು ಪಾವತಿ ಮಾಡಬೇಕಾಗಿರುತ್ತದೆ.

## 8. ಇಲಾಖೆಯ ಸಂಸ್ಥೆಗಳಿಗೆ ಕೈಗಾರಿಕಾ ಮೂಲಭೂತ ಸೌಕರ್ಯಗಳು ಕಾರ್ಯಕ್ರಮ

ಇಲಾಖೆಯ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿವಿಧ ನಿಗಮ ಮತ್ತು ಮಂಡಳಿಗಳಲ್ಲಿ ಮೂಲಭೂತ ಸೌಕರ್ಯವನ್ನು ಬಲಪಡಿಸಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಆಧುನಿಕ ಕೌಶಲ್ಯಾಭಿವೃದ್ಧಿ ತರಬೇತಿ ನೀಡಿ, ಉದ್ಯೋಗಾವಕಾಶ ಕಲ್ಪಿಸುವ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯ ತೆಂಗಿನ ನಾರಿನ ಮಹಾ ಮಂಡಳಿ ಹಾಗೂ ಕಿಲ್ಪ್ ಸಂಸ್ಥೆಗಳಿಗೆ ಮೂಲಭೂತ ಸೌಲಭ್ಯವನ್ನು ಅನುದಾನದ ರೂಪದಲ್ಲಿ ಮಂಜೂರು ಮಾಡಲಾಗುವುದು.

**ಅರ್ಹತೆ/ಆಯ್ಕೆ ಮಾನದಂಡ**

- ಇಲಾಖೆಯಡಿ ಕಾರ್ಯ ನಿರ್ವಹಿಸುತ್ತಿರುವ ಸಂಸ್ಥೆಗಳಿಗೆ ಸ್ವಂತ ಭೂಮಿ ಮತ್ತು ಕಟ್ಟಡ ಇದ್ದಲ್ಲಿ ಹಾಲಿ ಇರುವ ಮೂಲಭೂತ ಸೌಕರ್ಯಗಳ ಜೊತೆಗೆ ತರಬೇತಿಗೆ ಅವಶ್ಯಕತೆ ಇರುವ ಹೆಚ್ಚುವರಿ ಕಟ್ಟಡ ನಿರ್ಮಾಣ ಹಾಗೂ ಆಧುನಿಕ ಯಂತ್ರೋಪಕರಣಗಳು/ ಉಪಕರಣಗಳನ್ನು ಖರೀದಿಸಿ ಅಳವಡಿಸಲು ಅವಕಾಶವಿರುತ್ತದೆ.

- ಸಂಸ್ಥೆಯವರು ಯಂತ್ರೋಪಕರಣ/ಉಪಕರಣಗಳನ್ನು ಖರೀದಿಸಿದ ನಂತರ ತರಬೇತಿ/ಉತ್ಪಾದನಾ ಕೇಂದ್ರಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ತರಬೇತಿ/ ಉತ್ಪಾದನಾ ಕೇಂದ್ರಗಳಲ್ಲಿ ಉದ್ಯೋಗ ಕಲ್ಪಿಸಬೇಕಾಗುವುದು.

## 9. ಖಾದಿ ನೇಕಾರರಿಗೆ ಉಚಿತ ಚರಕಗಳ ಸರಬರಾಜು

ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆಯಡಿ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ವತಿಯಿಂದ ಗುರುತಿಸಿದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಆರ್ಥಿಕ ಮತ್ತು ಸಾಮಾಜಿಕ ಜೀವನ ಮಟ್ಟವು ಸುಧಾರಿಸುವ ಸಲುವಾಗಿ ಪ.ಜಾ/ಪ.ಪಂ. ದ ಖಾದಿ ನೇಕಾರರಿಗೆ ರೂ.13,500-00 ಮೌಲ್ಯದ ಖಾದಿ ಚರಕಗಳನ್ನು ಉಚಿತವಾಗಿ ನೀಡಲಾಗುವುದು.

## 10. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಅಧ್ಯಯನ ಪ್ರವಾಸ

ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಉದ್ದಿಮೆದಾರರು ತಮ್ಮ ಕೈಗಾರಿಕೆ ಚಟುವಟಿಕೆಯನ್ನು ಅಭಿವೃದ್ಧಿಪಡಿಸಲು / ಆಧುನಿಕ / ತಾಂತ್ರಿಕ ನೈಪುಣ್ಯತೆ ಹೊಂದಲು ಹಾಗೂ ಮಾರುಕಟ್ಟೆ ಅಭಿವೃದ್ಧಿಗೆ ಸಹಾಯಕವಾಗಿ ಇತರ ರಾಜ್ಯಗಳು /ಹೊರದೇಶಗಳಿಗೆ ಪ್ರವಾಸ ಕೈಗೊಂಡು ಅಧ್ಯಾಯನ

ಮಾಡಲು ತಗಲುವ ಪ್ರವಾಸ ವೆಚ್ಚದಲ್ಲಿ ಸರ್ಕಾರದ ವತಿಯಿಂದ ಶೇ.90ರಷ್ಟು ರಿಯಾಯಿತಿ ಈ ಕೆಳಕಂಡಂತೆ ಮಿತಿಗೊಳಿಸಿ ಮಂಜೂರು ಮಾಡಲಾಗುವುದು.

**ಯೋಜನೆಯ ರೂಪುರೇಷೆ :**

- ಅಧ್ಯಯನ ಪ್ರವಾಸವು ಇತರೆ ರಾಜ್ಯಗಳಲ್ಲಿ ಕೈಗೊಂಡಿದ್ದಲ್ಲಿ, ಒಬ್ಬ ಅಭ್ಯರ್ಥಿಗೆ ಗರಿಷ್ಠ ರಿಯಾಯಿತಿ ರೂ.15,000/-ಗಳು ಅಥವಾ ನಿಖರವಾದ ಖರ್ಚು, ಇವುಗಳಲ್ಲಿ ಯಾವುದು ಕಡಿಮೆಯೋ, ಅದನ್ನು ಪರಿಗಣಿಸಲಾಗುವುದು.
- ಅಧ್ಯಯನ ಪ್ರವಾಸದ ಶೇ.90 ರಷ್ಟು ಅಥವಾ ಹೊರದೇಶಗಳಲ್ಲಿ ಕೈಗೊಂಡಿದ್ದಲ್ಲಿ ಒಬ್ಬ ಅಭ್ಯರ್ಥಿಗೆ ಗರಿಷ್ಠ ರಿಯಾಯಿತಿ ಶೇ.90 ರಷ್ಟು ಅಥವಾ ರೂ.1,00,000/-ಗಳು ಅಥವಾ ನಿಖರವಾದ ಖರ್ಚು, ಇವುಗಳಲ್ಲಿ ಯಾವುದು ಕಡಿಮೆಯೋ, ಅದನ್ನು ಪರಿಗಣಿಸಲಾಗುವುದು.

**ಅರ್ಹತೆ:**

- ಉದ್ದಿಮೆದಾರರು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಕ್ಕೆ ಸೇರಿರತಕ್ಕದ್ದು.
- ಕೈಗಾರಿಕಾ ಉದ್ದಿಮೆದಾರರು ಕನಿಷ್ಠ 03 ವರ್ಷಗಳ ಹಿಂದೆ ಪ್ರಾರಂಭಿಸಿದ್ದು ಹಾಲಿ ಚಾಲ್ತಿಯಲ್ಲಿ ಇರತಕ್ಕದ್ದು.
- ಒಂದು ಅಧ್ಯಯನ ಪ್ರವಾಸ ತಂಡದಲ್ಲಿ ಕನಿಷ್ಠ 10 ಉದ್ದಿಮೆದಾರರು ಇರತಕ್ಕದ್ದು.
- ಪ್ರವಾಸದ ಅವಧಿಯು ಕನಿಷ್ಠ 03 ದಿನ ಹಾಗೂ ಗರಿಷ್ಠ 07 ದಿನಗಳ ಅವಧಿ ಇರತಕ್ಕದ್ದು.
- ಒಬ್ಬ ಕೈಗಾರಿಕೋದ್ಯಮಿಯು ಹೊರ ರಾಜ್ಯಕ್ಕೆ ಗರಿಷ್ಠ 02 ಬಾರಿ ಹಾಗೂ ಹೊರ ದೇಶಕ್ಕೆ 01 ಬಾರಿ ಅಧ್ಯಯನ ಪ್ರವಾಸ / ವಸ್ತು ಪ್ರದರ್ಶನಗಳಲ್ಲಿ ಭಾಗವಹಿಸಲು ಅವಕಾವಿರುತ್ತದೆ.

**ಅಧ್ಯಯನ ಪ್ರವಾಸಕ್ಕೆ ನೀಡುವ ಸಹಾಯಧನ ಬಿಡುಗಡೆ ವಿಧಾನ :**

- ಸರ್ಕಾರದಿಂದ ಮಂಜೂರಾತಿ ಪಡೆಯಲಾಗುವುದು.
- ಮಂಜೂರಾತಿ ನೀಡಿದ ನಂತರ ಅಧ್ಯಯನ ಪ್ರವಾಸ ಕೈಗೊಂಡ ನಂತರ ಪ್ರವಾಸದ ವೆಚ್ಚದ ವಿವರಗಳನ್ನು ಬಿಲ್ಲು ವೋಚರ್ ಇತ್ಯಾದಿಗಳನ್ನು ಪರಿಶೀಲಿಸಿ, ಅರ್ಹ ಅನುದಾನ ಬಿಡುಗಡೆ ಮಾಡಲಾಗುವುದು.

## 11. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಉದ್ಯಮಶೀಲತಾ ತರಬೇತಿ ಕಾರ್ಯಕ್ರಮ

ಜಿಲ್ಲಾ ಕೈಗಾರಿಕಾ ಕೇಂದ್ರಗಳ ಮೂಲಕ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಪ್ರತಿಷ್ಠಿತ ಸಂಸ್ಥೆಗಳ ಮೂಲಕ ಉದ್ಯಮಶೀಲತಾ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು.

## 12. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಖಾಸಗಿ ಕೈಗಾರಿಕಾ ವಸಾಹತು ಸ್ಥಾಪನೆಗೆ ಶೇ.50 ರಷ್ಟು ಮೂಲಭೂತ ಸೌಕರ್ಯಕ್ಕಾಗಿ ಅನುದಾನ

ಸಂಘ / ಸಂಸ್ಥೆ / ಟ್ರಸ್ಟ್ ಇವರು ಕೈಗಾರಿಕಾ ವಸಾಹಾತುವಿಗಾಗಿ ಕನಿಷ್ಠ 10 ಎಕರೆ ಸೂಕ್ತ ಭೂಮಿಯನ್ನು ಗುರ್ತಿಸಿ, ನಿವೇಶನ/ಮಳಿಗೆಗಳನ್ನು ನಿರ್ಮಾಣ ಮಾಡಲು ನೀಲಿ ನಕ್ಷೆಯನ್ನು ತಯಾರಿಸಿ ಸಕ್ಷಮ ಪ್ರಾಧಿಕಾರಿಗಳಿಂದ ಅನುಮೋದನೆಯನ್ನು ಪಡೆದು ಕೈಗಾರಿಕಾ ವಸಾಹಾತು ಅಭಿವೃದ್ಧಿ ಪಡಿಸಲು ವಿವರವಾದ ಅಂದಾಜು ವೆಚ್ಚದ ಪಟ್ಟಿಯನ್ನು ಲೋಕೋಪಯೋಗಿ ಇಲಾಖೆಯ ಎಸ್‌ಆರ್ ದರದಂತೆ Chartered Civil Engineer ರವರಿಂದ ತಯಾರಿಸಿ, ಇಲಾಖೆಯಿಂದ ಮೂಲಭೂತ ಸೌಕರ್ಯಕ್ಕಾಗಿ ಅನುದಾನವನ್ನು ಇಲಾಖೆಯಿಂದ ಪಡೆಯಲು ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾ ಕೈಗಾರಿಕಾ ಕೇಂದ್ರಗಳಿಗೆ ಪ್ರಸ್ತಾವನೆ ಸಲ್ಲಿಸುವುದು.

**ಆಯ್ಕೆ ಸಮಿತಿ: ಆಯುಕ್ತರು ಕೈಗಾರಿಕಾಭಿವೃದ್ದಿ ಹಾಗೂ ನಿರ್ದೇಶಕರು ಇವರ ಅಧ್ಯಕ್ಷತೆಯಲ್ಲಿರುವ ಆಯ್ಕೆ ಸಮಿತಿ ಸಭೆಯಲ್ಲಿ** ಈ ಯೋಜನೆಯಡಿ ಸೌಲಭ್ಯವನ್ನು ಪಡೆಯಲು ಅರ್ಹ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಸಂಘ/ಸಂಸ್ಥೆ/ಟ್ರಸ್ಟ್ ಆಯ್ಕೆ ಮಾಡಲಾಗುವುದು.

**ಅರ್ಹ ಸಹಾಯಧನ:**

ಕೈಗಾರಿಕಾ ವಸಾಹಾತುವಿನಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿ ಪಡಿಸಲು ತಗಲುವ ಅಂದಾಜು ವೆಚ್ಚದ ಮೇಲೆ ಶೇ.50ರಷ್ಟು ಗರಿಷ್ಠ ರೂ.500.00 ಲಕ್ಷಗಳನ್ನು ಇಲಾಖೆಯಿಂದ ಸಹಾಯಧನವಾಗಿ ಬಿಡುಗಡೆ ಮಾಡಬಹುದಾಗಿದೆ.

**ಸಹಾಯಧನ ಬಿಡುಗಡೆಗೆ ವಿಧಾನ :**

ಕೈಗಾರಿಕಾ ವಸಾಹಾತು ಸ್ಥಾಪಿಸುವ ಪ್ರವರ್ತಕರು ತಮ್ಮ ಪಾಲಿನ ಶೇ.50ರಷ್ಟು ಅಭಿವೃದ್ಧಿ ವೆಚ್ಚವನ್ನು ಭರಿಸಿದ ನಂತರ ಇಲಾಖೆ ವತಿಯಿಂದ ಅರ್ಹ ಮಂಜೂರಾದ ಸಹಾಯಧನವನ್ನು ಉಪಯುಕ್ತತೆಯನ್ನು ಪರಿಗಣಿಸಿ, ಮೂರು ಕಂತುಗಳಲ್ಲಿ ಕಾಮಗಾರಿಗಳ ಪ್ರಗತಿಗೆ ಅನುಸಾರವಾಗಿ ಹಂತ ಹಂತವಾಗಿ ಬಿಡುಗಡೆ ಮಾಡಲಾಗುವುದು. ಕಾಮಗಾರಿ ಪ್ರಗತಿ ಆಗಿರುವುದಕ್ಕೆ Chartered Engineer ರವರಿಂದ ಸರ್ಟಿಫಿಕೇಟ್ ಪಡೆಯತಕ್ಕದ್ದು.

## 13. ಹಣಕಾಸು ಸಂಸ್ಥೆ ವಿಧಿಸಿರುವ ಪರಿಷ್ಕರಣಾ ಶುಲ್ಕ, ಕಾನೂನು ಶುಲ್ಕ, ಇತರೆ ಶುಲ್ಕಗಳ ಮರುಪಾವತಿ

ದಿನಾಂಕ:01–04–2017 ರಿಂದ ಮೊದಲ ಬಾರಿಗೆ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರು ಸ್ಥಾಪಿಸುವ ಸಣ್ಣ ಮತ್ತು ಅತೀ ಸಣ್ಣ ಘಟಕಗಳೂ ಸಾಲ ಪಡೆಯುವ ಸಂದರ್ಭದಲ್ಲಿ ಕೆಎಸ್.ಎಫ್ ಸಿ ಮತ್ತು ಇತರೇ ಹಣಕಾಸು ಸಂಸ್ಥೆಯವರು ವಿಧಿಸಿರುವ ಪರಿಷ್ಕರಣಾ ಶುಲ್ಕ, ಕಾನೂನು ಶುಲ್ಕ, ಏಕಕಾಲಿಕ ಸಾಲ ವಿತರಣಾ ಶುಲ್ಕ ಮತ್ತು ಇತರೆ ಶುಲ್ಕಗಳನ್ನು ಭರಿಸಲಾಗುವ್ವದು.

**ಅರ್ಹತೆ**

- ದಿನಾಂಕ:01–04–2017ರ ನಂತರ ಉತ್ಪಾದನೆ ಪ್ರಾರಂಬಿಸುವ ಹೊಸ ಘಟಕ ಕೈಗಾರಿಕ ಘಟಕಗಳು.
- ಅತೀ ಸಣ್ಣ ಕೈಗಾರಿಕೆ : ಯಂತ್ರೋಪಕರಣಗಳ ಮೇಲೆ ಬಂಡವಾಳ ಹೂಡಿಕೆ ಮಿತಿ ರೂ.25.00 ಲಕ್ಷ.
- ಸಣ್ಣ ಕೈಗಾರಿಕೆ : ಯಂತ್ರೋಪಕರಣಗಳ ಮೇಲೆ ಬಂಡವಾಳ ಹೂಡಿಕೆ ಮಿತಿ ರೂ.500.00 ಲಕ್ಷ.

## 14. ವಿದ್ಯುತ್‌ಚ್ಛಕ್ತಿ ಸಹಾಯಧನ.

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ಯಮಗಳು ದಿನಾಂಕ:01–04–2017 ರಿಂದ ಪ್ರಾರಂಭವಾಗಿರುವ ಹೊಸ ಸಣ್ಣ ಮತ್ತು ಅತೀ ಸಣ್ಣ ಕೈಗಾರಿಕಾ ಘಟಕಗಳಿಗೆ ಮೊದಲ 5 ವರ್ಗಗಳ ಅವಧಿಗೆ ಪ್ರತಿ ಯುನಿಟ್‌ಗೆ 2 ರೂ.ಗಳಷ್ಟು ವಿದ್ಯುಚ್ಛಕ್ತಿ ಸಹಾಯಧನ ನೀಡಲಾಗುವುದು.

**ಅರ್ಹತೆ**

- ದಿನಾಂಕ:01–04–2017 ರನಂತರ ಉತ್ಪಾದನೆ ಪ್ರಾರಂಬಿಸುವ ಹೊಸ ಕೈಗಾರಿಕ ಘಟಕಗಳು.
- ಅತೀ ಸಣ್ಣ ಕೈಗಾರಿಕೆ : ಯಂತ್ರೋಪಕರಣಗಳ ಮೇಲೆ ಬಂಡವಾಳ ಹೂಡಿಕೆ ಮಿತಿ ರೂ.25.00 ಲಕ್ಷ.
- ಸಣ್ಣ ಕೈಗಾರಿಕೆ :ಯಂತ್ರೋಪಕರಣಗಳ ಮೇಲೆ ಬಂಡವಾಳ ಹೂಡಿಕೆ ಮಿತಿ ರೂ.500.00 ಲಕ್ಷ.

**ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರು ವಿದ್ಯುಚ್ಛಕ್ತಿ ಸಹಾಯಧನ ಪಡೆಯಲು ಸಲ್ಲಿಸಬೇಕಾದ ದಾಖಲಾತಿಗಳು :**

- ಅರ್ಜಿ ನಮೂನೆ – 1
- ಭೂಮಿ ಮತ್ತು ಕಟ್ಟಡದ ದಾಖಲಾತಿ.
- ನೋಂದಾಯಿತ ಪಾಲುದಾರಿಕೆ ಪಪತ್ರ / ಸಂಘ ಸಂಸ್ಥೆಗೆ ನೋಂದಣಿ/ಮೆಮೊರಂಡಮ್ ಆಫ್ ಆರ್ಟಿಕಲ್ಸ್
- ಧೃಢೀಕೃತ ಜಾತಿ ಪ್ರಮಾಣ ಪತ್ರ
- ಉದ್ಯೋಗ ಆಧಾರ ಪ್ರಮಾಣ ಪತ್ರ (ಯೂ.ಎ.ಎಂ) ಮತ್ತು ಪ್ಯಾನ್ ಕಾರ್ಡ್ ಪ್ರಮಾಣಪತ್ರ.
- ವಿದ್ಯುಚ್ಛಕ್ತಿ ಮಂಜೂರಾತಿ ಪತ್ರ (ಘಟಕದ ಮಾಲೀಕರು / ಘಟಕದ ಹೆಸರಿನಲ್ಲಿ ಮಂಜೂರಾತಿ).
- ವಿದ್ಯುತ್‌ಚ್ಛಕ್ತಿ ಸರ್ವೀಸ್ ಪತ್ರ (ಘಟಕದ ಮಾಲೀಕರು / ಘಟಕದ ಹೆಸರಿನಲ್ಲಿ ಮಂಜೂರಾತಿ).
- ಮೊದಲನೇ ಮಾರಾಟದ ಬಿಲ್.
- ಸ್ಥಳೀಯರಿಗೆ ಉದ್ಯೋಗ ನೀಡಿದ ವಿವರ ಅನುಬಂಧ–2 ರಲ್ಲಿ
- ಬ್ಯಾಂಕ್ ಖಾತೆಯ ವಿವರ ಅನುಬಂಧ–3 ರಲ್ಲಿ
- ವಿದ್ಯುತ್‌ಚ್ಛಕ್ತಿ ಬಿಲ್ ಮತ್ತು ಪಾವತಿ ರಶೀದಿಗಳು
- ಉತ್ಪಾದನಾ ವಿವರ (ಪರಿಮಾಣ ಮತ್ತು ಮೊಬಲಗು)

## ಹೊಸ ಕೈಗಾರಿಕೆ ಸ್ಥಾಪಿಸುವ ಪ್ರಥಮ ಪೀಳಿಗೆಯ ಮಹಿಳೆಯರಿಗೆ ಶೇ 4% ಬಡ್ಡಿದರದಲ್ಲಿ ಸಾಲ

**ಬಡ್ಡಿ ಸಹಾಯಧನ ಯೋಜನೆ**

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯವರು ರಾಜ್ಯದಲ್ಲಿ ಸಣ್ಣ / ಮಧ್ಯಮ ತಯಾರಿಕಾ ಕೈಗಾರಿಕೆಗಳು ಹಾಗೂ ಸೇವಾ ಘಟಕಗಳ ಮಹಿಳಾ ಉದ್ದಿಮೆದಾರರಿಗೆ ಶೇಕಡ 13% ರಿಂದ 14% ರಂತೆ ಬಡ್ಡಿಯನ್ನು ವಿಧಿಸುತ್ತಿರುವುದಾಗಿ ತಿಳಿಸುತ್ತಾ ಈ ಉದ್ದಿಮೆದಾರರಿಗೆ ಹೆಚ್ಚಿನ ಆದ್ಯತೆ ಹಾಗೂ ಉತ್ತೇಜನ ನೀಡುವ ಸಲುವಾಗಿ ಬಡ್ಡಿಯಲ್ಲಿ ರಿಯಾಯಿತಿಯನ್ನು ನೀಡಲು ಸರ್ಕಾರದ ಯೋಜನೆಯಲ್ಲಿ ಉದ್ದೇಶಿಸಲಾಗಿದೆ.

ಈ ಯೋಜನೆಯಡಿಲ್ಲಿ ಕನಿಷ್ಠ ರೂ.5.00 ಲಕ್ಷದಿಂದ ಗರಿಷ್ಟ ರೂ.2.00 ಕೋಟಿಗಳವರೆಗೆ ಸಾಲವನ್ನು ಕಲ್ಪಿಸಲಾಗುತ್ತದೆ. ಬಡ್ಡಿ ಸಹಾಯಧನ ಯೋಜನೆಯ ರೂಪುರೇಷೆಗಳು ಈ ಕೆಳಕಂಡಂತಿವೆ.

1. **ಉದ್ದೇಶ :** ಎಂ.ಎಸ್.ಎಂ.ಇ.ಡಿ. ಕಾಯ್ದೆ 2006ರಲ್ಲಿ ಸೂಚಿಸಿದಂತೆ ಅತಿ ಸಣ್ಣ, ಸಣ್ಣ / ಮಧ್ಯಮ ಗಾತ್ರದ ಕೈಗಾರಿಕೆಗಳು ಹಾಗೂ ಸೇವಾ ಘಟಕಗಳ ಮಹಿಳಾ ಉದ್ದಿಮೆದಾರರಿಗೆ ಉತ್ತೇಜನ ನೀಡುವ ಸಲುವಾಗಿ ಹಾಗೂ ಹಾಲಿ ಕಾರ್ಯನಿರ್ವಹಿಸುತ್ತಿರುವ ಘಟಕಗಳನ್ನು ಅಭಿವೃದ್ಧಿ ಪಡಿಸುವುದು. ಆದರೆ ಈಗಾಗಲೇ ಬ್ಯಾಂಕು / ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದಿರುವ ಘಟಕಗಳು ತಮ್ಮ ಸಾಲವನ್ನು ಈ ಯೋಜನೆಯಡಿ ವರ್ಗಾಯಿಸಲು ಬರುವುದಿಲ್ಲ.

2. **ನೋಡಲ್ ಏಜೆನ್ಸಿ :** ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮವು ಈ ಯೋಜನೆಯನ್ನು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಸಹಯೋಗದೊಂದಿಗೆ ಅನುಷ್ಠಾನಗೊಳಿಸುತ್ತಿದೆ.

3. **ಅರ್ಹತೆ :** ಈ ಕೆಳಗಿನಂತೆ ಯೋಜನೆಯಡಿ ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ.
   - I) ಮಹಿಳಾ ಉದ್ದಿಮೆದಾರರು ಮೊದಲನೇ ಬಾರಿ ಹೊಸ ಘಟಕವನ್ನು ಪ್ರಾರಂಭಿಸುವ ಸಲುವಾಗಿ;
   - II) ಹಾಲಿ ಕಾರ್ಯನಿರ್ವಹಿಸುತ್ತಿರುವ ಅತಿ ಸಣ್ಣ / ಸಣ್ಣ / ಮಧ್ಯಮ ಕೈಗಾರಿಕೆಗಳು ಹಾಗೂ ಸೇವಾ ಘಟಕಗಳ ಉದ್ದಿಮೆದಾರರು ತಮ್ಮ ಘಟಕವನ್ನು ಅಭಿವೃದ್ಧಿಪಡಿಸುವ ಸಲುವಾಗಿ / ಆಧುನೀಕರಣಗೊಳಿಸುವ ಸಲುವಾಗಿ,
   - III) 1) ಈ ಘಟಕದ ಮಾಲೀಕರು ಮಹಿಳಾ ಅಭ್ಯರ್ಥಿಯಾಗಿರಬೇಕು.
     2) ಪಾಲುದಾರಿಕೆಯ ಉದ್ಯಮ / ನಿಯಮಿತ ಕಂಪನಿಗಳಲ್ಲಿ ಮಹಿಳೆಯರ ಹೆಚ್ಚಿನ ಷೇರು / ನಿರ್ದೇಶಕರು ಶೇಕಡ 50 ರಷ್ಟು ಇರಬೇಕು.

4. **ಸಾಲದ ಗಾತ್ರ :** ಈ ಯೋಜನೆಯಡಿಯಲ್ಲಿ ಸಂಸ್ಥೆಯ "ಸಾಲ ನೀತಿ" ಯ ಅನುಸಾರ ಅರ್ಹ ಫಲಾನುಭವಿಗಳಿಗೆ ಕನಿಷ್ಟ ರೂ.5.00 ಲಕ್ಷಗಳಿಂದ ಗರಿಷ್ಟ ರೂ.2.00 ಕೋಟಿಗಳವರೆಗೆ ಸಾಲ ಸೌಲಭ್ಯವನ್ನು ಕೆ.ಎಸ್.ಎಫ್.ಸಿ. ಮೂಲಕ ಕಲ್ಪಿಸಲಾಗುತ್ತದೆ. ವಿವಿಧ ಚಟುವಟಿಕೆಗಳಿಗೆ ಕನಿಷ್ಟ ರೂ.5.00 ಲಕ್ಷಗಳ ಸಾಲವನ್ನು ಈಗಾಗಲೇ ತೆಗೆದುಕೊಂಡ ಘಟಕಗಳ ವಿಸ್ತರಣೆ / ಅಧುನೀಕರಣಕ್ಕಾಗಿ ವೈದ್ಯರು ಹಾಗೂ ಪಶು ವೈದ್ಯರು ಇವರಿಗೆ ಕನಿಷ್ಟ 5.00ಲಕ್ಷ ರೂ.ಗಳ ಸಾಲ.

5. **ಬಡ್ಡಿ ಸಹಾಯಧನ :** ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಸಾಲವನ್ನು ಮಂಜೂರು ಮಾಡುತ್ತದೆ. ಇದಕ್ಕೆ ಅವರ ನೀತಿ ನಿಬಂಧನೆಗಳಂತೆ ಬಡ್ಡಿಯನ್ನು ವಿಧಿಸುತ್ತಾರೆ. ಕ.ರಾ.ಹ. ಸಂಸ್ಥೆಯಿಂದ ಮಂಜೂರಾದ ಸಾಲದ ಮೇಲೆ ಶೇಕಡ 14ರಷ್ಟು ಬಡ್ಡಿ ವಿಧಿಸಲಾಗುತ್ತದೆ. ಅದರಲ್ಲಿ ಶೇಕಡ 10ರಷ್ಟು ಬಡ್ಡಿದರವನ್ನು ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಮೂಲಕ ನೀಡಲಾಗುವುದು. ಫಲಾನುಭವಿಗಳು ವಾರ್ಷಿಕ ಶೇಕಡ 4ರಷ್ಟು ಬಡ್ಡಿದರ ಪಾವತಿಸ ಬೇಕಾಗಿರುತ್ತದೆ. ಪ್ರತಿ ತಿಂಗಳು ಕ.ರಾ.ಹ. ಸಂಸ್ಥೆಗೆ ಚಾಚೂ ತಪ್ಪದೆ ಮರುಪಾವತಿ ಮಾಡುವಂತಹವರು ಮಾತ್ರ ಈ ಬಡ್ಡಿ ಸಹಾಯಧನ ಪಡೆಯಲು ಅರ್ಹರಿರುತ್ತಾರೆ.

6. **ಬಡ್ಡಿ ಸಹಾಯಧನದ ಅವಧಿ :** ಫಲಾನುಭವಿಯು ಸಾಲದ ಮೊದಲ ಕಂತು ಪಡೆದ ದಿನಾಂಕ ದಿಂದ 5 ವರ್ಷಗಳವರೆಗೆ ಬಡ್ಡಿ ಸಹಾಯಧನಕ್ಕೆ ಅರ್ಹರಾಗಿರುತ್ತಾರೆ. ಘಟಕದ ವೆಚ್ಚಕ್ಕೆ ಅನುಸಾರವಾಗಿ ಕ.ರಾ.ಹ.ಸಂಸ್ಥೆಯವರು ಮರುಪಾವತಿಯ ಅವಧಿಯನ್ನು ವಿಸ್ತರಿಸುವ ಅಧಿಕಾರ ಹೊಂದಿರುತ್ತಾರೆ. ಬಡ್ಡಿ ಸಹಾಯಧನ ಯೋಜನೆಯ 5 ವರ್ಷಕ್ಕೆ ಮಾತ್ರ ಸೀಮಿತವಾಗಿರುತ್ತದೆ.

## ತೆಂಗಿನ ನಾರಿನ ಅಭಿವೃದ್ಧಿ ಯೋಜನೆಗಳು

### ತೆಂಗಿನ ನಾರಿನ ಕಾರ್ಮಿಕರಿಗೆ ಪ್ರೋತ್ಸಾಹಧನ ಯೋಜನೆ:

ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಸಂಸ್ಥೆಯಲ್ಲಿ ತೆಂಗಿನ ನಾರಿನ ಉತ್ಪನ್ನಗಳನ್ನು ತಯಾರಿಕೆ ಮಾಡಲಾಗುತ್ತಿದ್ದು, ಸದರಿ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕೆಲಸಗಾರರಿಗೆ ನಿಗಮವು ಪಾವತಿಸುವ ತುಂಡು ಭತ್ಯೆಯೊಂದಿಗೆ ಸರ್ಕಾರವು ಘೋಷಿಸಿದ ಅನುರೂಪ ವೇತನ ಪ್ರೋತ್ಸಾಹ ಮಜೂರಿಯನ್ನು ಪಾವತಿಸಲಾಗುವುದು.

## ಖಾದಿ ಮತ್ತು ಗ್ರಾಮೋದ್ಯೋಗ ಅಭಿವೃದ್ಧಿ ಯೋಜನೆಗಳು

### ಮಾರುಕಟ್ಟೆ ಅಭಿವೃದ್ಧಿ ಸಹಾಯಧನ (ಎಂ.ಡಿ.ಎ).

ಖಾದಿ ಸಂಘ ಸಂಸ್ಥೆಗಳು ಉತ್ಪಾದಿಸುತ್ತಿರುವ ಖಾದಿ ಉತ್ಪನ್ನಗಳಿಗೆ ಹೆಚ್ಚಿನ ಮಾರುಕಟ್ಟೆ ಒದಗಿಸುವ ದೃಷ್ಟಿಯಿಂದ ಹಾಗೂ ಕಸುಬುದಾರರಿಗೆ ಹೆಚ್ಚಿನ ಉದ್ಯೋಗವಕಾಶ ನೀಡುವ ದೃಷ್ಟಿಯಿಂದ ಕೇಂದ್ರ ಸರ್ಕಾರವು ಮಾರುಕಟ್ಟೆ ಅಭಿವೃದ್ಧಿ ಸಹಾಯಧನ (ಎಂ.ಡಿ.ಎ) ಯೋಜನೆಯನ್ನು ನೀಡಲಾಗುವುದು. ಖಾದಿ ಸಂಘ: ಸಂಸ್ಥೆಗಳು ಉತ್ಪಾದಿಸುವ ಖಾದಿ ಉತ್ಪನ್ನಗಳ ಮೇಲೆ ಎಂಡಿಎ ಸಹಾಯಧನವನ್ನು ಅರ್ಹ ಖಾದಿ ಸಂಘ ಸಂಸ್ಥೆಗಳಿಗೆ ನೀಡಲಾಗುವುದು. ಸದರಿ ಎಂಡಿಎ ಪೈಕಿ ಶೇ.25 ರಷ್ಟು ಕಸಬುದಾರರಿಗೆ ನೇರವಾಗಿ ಬಿಡುಗಡೆ ಮಾಡಲಾಗುವುದು. ಶೇ.30 ರಷ್ಟು ಸಂಘ:ಸಂಸ್ಥೆಗಳ ಉತ್ಪಾದನೆಯನ್ನು ಹೆಚ್ಚಿಸುವ ಸಲುವಾಗಿ ಸಲಕರಣೆಗಳ ಖರೀದಿ,ತರಬೇತಿ ಇತ್ಯಾದಿಗಳಿಗಾಗಿ ಹಾಗೂ ಶೇ.40 ರಷ್ಟನ್ನು ಮಾರಾಟದ ವಹಿವಾಟಿಗಾಗಿ ಉಪಯೋಗಿಸಲಾಗುವುದು.

## ಪ್ರೋತ್ಸಾಹ ಮಜೂರಿ:

ಕರ್ನಾಟಕ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾದಿ ಸಂಘ ಸಂಸ್ಥೆಗಳು ಉತ್ಪಾದಿಸುತ್ತಿರುವ ಖಾದಿ ಉತ್ಪನ್ನಗಳಿಗೆ ಹೆಚ್ಚಿನ ಮಾರುಕಟ್ಟೆ ಒದಗಿಸುವ ದೃಷ್ಟಿಯಿಂದ ಹಾಗೂ ಕಸುಬುದಾರರಿಗೆ ನಿರಂತರ ಉದ್ಯೋಗವಕಾಶ ನೀಡುವ ದೃಷ್ಟಿಯಿಂದ ಪ್ರೋತ್ಸಾಹ ಮಜೂರಿ ಅನುದಾನವನ್ನು ಖಾದಿ ಸಂಘ:ಸಂಸ್ಥೆಗಳಲ್ಲಿ ದುಡಿಯುತ್ತಿರುವ ನೂಲುಗಾರರು, ನೇಕಾರರು ಹಾಗೂ ಖಾದಿ ಕಾರ್ಯಕರ್ತರಿಗೆ ಬಿಡುಗಡೆ ಮಾಡಲಾಗುವುದು.

## ಜಿಲ್ಲಾ ಪಂಚಾಯತ್ ಯೋಜನೆಗಳು

## 1. ಕೌಶಲ್ಯಾಭಿವೃದ್ಧಿ ಮತ್ತು ಕುಶಲಕರ್ಮಿಗಳ ಸಮೂಹ ಅಭಿವೃದ್ಧಿ :

ಈ ಯೋಜನೆಯಡಿ ಗ್ರಾಮೀಣ ಪ್ರದೇಶದ ಕುಶಲಕರ್ಮಿಗಳಿಗೆ / ವೃತ್ತಿಪರರಿಗೆ ತರಬೇತಿ ಕಾರ್ಯಕ್ರಮ ಹಾಗೂ ತರಬೇತಿ ಹೊಂದಿದ ಅಭ್ಯರ್ಥಿಗಳಿಗೆ ಉಚಿತ ಸುಧಾರಿತ ಉಪಕರಣಗಳ ಸರಬರಾಜು ಕಾರ್ಯಕ್ರಮ ಅನುಷ್ಠಾನಗೊಳಿಸಬಹುದಾಗಿದೆ. ಕಾರ್ಯಕ್ರಮದ ಅನುಷ್ಠಾನಕ್ಕೆ ಅನುದಾನ ಲಭ್ಯತೆ ಕೆಳಕಂಡಂತೆ ಇರುತ್ತದೆ.

## ತರಬೇತಿ :

ಉದ್ಯೋಗ ಮತ್ತು ತರಬೇತಿ ಇಲಾಖೆ ವತಿಯಿಂದ ಜಾರಿಯಲ್ಲಿರುವ ಕೇಂದ್ರ ಸರ್ಕಾರದ ಎಂಇಎಸ್ ಯೋಜನೆಯಡಿ ನಿಗಧಿಪಡಿಸಿರುವ ಕೌಶಲ್ಯಾಭಿವೃದ್ಧಿ ತರಬೇತಿ ಅವಧಿ ಮತ್ತು ವೆಚ್ಚವನ್ನು ಅನುಸರಿಸಿ ಅದರಂತೆ ಜಿಲ್ಲಾ ಪಂಚಾಯತ್ ಕೈಗಾರಿಕಾ ಸ್ಥಾಯಿ ಸಮಿತಿಯಲ್ಲಿ ಪ್ರಸ್ತಾವನೆಗಳನ್ನು ಮಂಡಿಸಿ ಅನುಮೋದನೆ ಪಡೆದು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು.

**ತರಬೇತಿ ಕೇಂದ್ರಗಳನ್ನು ಗುರ್ತಿಸಿ/ತರಬೇತಿ ಕಾರ್ಯಕ್ರಮ ಅನುಷ್ಠಾನಗೊಳಿಸಲು ಅನುಸರಿಸಬೇಕಾದ ವಿಧಾನ**

1. ತರಬೇತಿ ಕೇಂದ್ರದಲ್ಲಿ ಸಾಕಷ್ಟು ಮೂಲಭೂತ ಸೌಕರ್ಯ ಇರತಕ್ಕದ್ದು.
2. ತರಬೇತಿ ನೀಡುವ ಭೋಧಕರು ಅನುಭವಿಸ್ತರಾಗಿರಬೇಕು
3. ಇಲಾಖೆಯ ಅಧಿಕಾರಿಗಳು ಕೇಂದ್ರಕ್ಕೆ ಸತತವಾಗಿ ಭೇಟಿನೀಡಿ ತರಬೇತಿ ಗುಣಮಟ್ಟವನ್ನು ಪರಿಶೀಲಿಸುವುದು.
4. ತರಬೇತಿ ಪಡೆದ ಅಭ್ಯರ್ಥಿಗಳಿಗೆ ಉದ್ಯೋಗ ಅವಕಾಶ ಕಲ್ಪಿಸುವುದು.
5. ಪ್ರಸಕ್ತ ಸನ್ನಿವೇಶಕ್ಕೆ ಹೊಂದುವಂತಹ ಆಯ್ದ ವೃತ್ತಿಗಳಲ್ಲಿ ಅನುಬಂಧ-2ರಂತೆ ತರಬೇತಿ ನೀಡುವುದು.
6. ಖಾಸಗಿ ತರಬೇತಿ ಕೇಂದ್ರಗಳಲ್ಲಿ ಅಭ್ಯರ್ಥಿಗಳನ್ನು ನಿಯೋಜಿಸುವಾಗ ಗರಿಷ್ಠ 10ಕ್ಕಿಂತ ಹೆಚ್ಚು ಅಭ್ಯರ್ಥಿಗಳನ್ನು ನಿಯೋಜಿಸಬಾರದು.

ಪ್ರಸಕ್ತ ಸನ್ನಿವೇಶಕ್ಕೆ ಹೊಂದುವಂತಹ ಆಯ್ದ ವೃತ್ತಿಗಳಲ್ಲಿ ಅನುಬಂಧ-1 ರಂತೆ ಕುಶಲಕರ್ಮಿಗಳಿಗೆ ತರಬೇತಿ ನೀಡುವುದು ಹಾಗೂ ಇತರೆ ವೃತ್ತಿಪರರಿಗೆ ಅನುಬಂಧ-2 ರಂತೆ ವಿವಿಧ ವೃತ್ತಿಗಳಲ್ಲಿ ತರಬೇತಿಯ ನೀಡಬೇಕು. ತರಬೇತಿಯ ನಂತರ ತರಬೇತಿ ಹೊಂದಿದ ಪ್ರತಿ ಅಭ್ಯರ್ಥಿಗೆ ರೂ. 8000/- ಗಳ ಮೊತ್ತದ ಉಚಿತ ಉಪಕರಣ ನೀಡಬಹುದಾಗಿದೆ. ಇದರಿಂದಾಗಿ ಅಭ್ಯರ್ಥಿಯು ತಾನು ತರಬೇತಿ ಪಡೆದ ಕಸುಬಿನಲ್ಲಿ ಸ್ವ-ಉದ್ಯೋಗ ಪ್ರಾರಂಭಿಸಲು ಸಹಾಯವಾಗುತ್ತದೆ.

ಜಿಲ್ಲಾ ಯೋಜನೆಯಡಿ ಸುಧಾರಿತ ಉಪಕರಣ / ವಸತಿ ಕಾರ್ಯಗಾರ ನೀಡಬಹುದಾದ ವೃತ್ತಿಗಳ ಪಟ್ಟಿ

**ಅನುಬಂಧ-1**

| | |
|---|---|
| 1. ಬಡಗಿತನ/ ಬಾರ್ಬರ್/ ಧೋಬಿ/ ಕಲ್ಲುಕುಟುಕ / ಚರ್ಮಗಾರಿಕೆ/ ಮೇಸನ್ | 2. ಬ್ಯೂಟಿ ಪಾರ್ಲರ್ |
| 3. ಕುಂಬಾರಿಕೆ | 4. ಬೆತ್ತದ ಕೆಲಸ |
| 5. ಕಮ್ಮಾರಿಕೆ | 6. ಕರಕುಶಲ ವಸ್ತು ತಯಾರಿಸುವವರು |
| 7. ಜನರಲ್ ಇಂಜಿನಿಯರಿಂಗ್ | 8. ಬುಟ್ಟಿ ಹಣೆಯುವುದು |
| 9. ಕಸೂತಿ / ಟೈಲರಿಂಗ್ (ಹೊಲಿಗೆ) | |

**ಅನುಬಂಧ-2 : ನಿರುದ್ಯೋಗಿ ಯುವಕ / ಯುವತಿಯರಿಗೆ ವಿವಿಧ ಕೌಶಲ್ಯಾಭಿವೃದ್ಧಿ ತರಬೇತಿಗಳು ಪಡೆದ ನಂತರ**

| | |
|---|---|
| 1. ಎಲೆಕ್ಟ್ರಿಕಲ್ ವೈರಿಂಗ್ | 2. ಮೋಟಾರ್ ರಿವೈಂಡಿಂಗ್ |
| 3. ಫ್ಯಾಷನ್ ಡಿಸೈನಿಂಗ್/ ಸಿದ್ಧ ಉಡುಪು ತಯಾರಿಕೆ | 4. ಜನರಲ್ ಇಂಜಿನಿಯರಿಂಗ್ ಅಂಡ್ ಫ್ಯಾಬ್ರಿಕೇಷನ್ |
| 5. ಪ್ಲಂಬಿಂಗ್ ಅಂಡ್ ಸ್ಯಾನಿಟರಿ | 6. ಲೇತ್ ಆಪರೇಟಿಂಗ್ |
| 7. ರಿಪೈನಿಂಗ್ ಅಂಡ್ ಸರ್ವಿಸಿಂಗ್ ಆಫ್ ಹೌಸ್ ಹೋಲ್ಡ್ ಅಪ್ಲೈಯನ್ಸಸ್ | 8. ಸ್ಥಳೀಯ ಬೇಡಿಕೆ ಇರುವ ಇನ್ನಿತರ ಕೌಶಲ್ಯಾಭಿವೃದ್ಧಿ ವೃತ್ತಿ / ಎಮ್.ಇ.ಎಸ್ ಚಟುವಟಿಕೆ |
| 9. ಮೊಬೈಲ್ ರಿಪೇರಿ ಸರ್ವಿಸಿಂಗ್ | |

**ವಸತಿ ಕಾರ್ಯಾಗಾರ :**

ಗ್ರಾಮೀಣ ಪ್ರದೇಶದಲ್ಲಿ ಅನುಬಂಧದಲ್ಲಿ ಕಾಣಿಸಿದ ವೃತ್ತಿಪರ / ಕುಶಲಕರ್ಮಿಗಳಿಗೆ ವೃತ್ತಿಪರರಿಗೆ ವಸತಿ ಕಾರ್ಯಾಗಾರ ನಿರ್ಮಾಣಕ್ಕಾಗಿ ಪ್ರತಿ ಕಾರ್ಯಾಗಾರಕ್ಕೆ ರೂ.100000/-ಗಳನ್ನು ನಿಗಧಿಪಡಿಸಿದ್ದು, ಇದರಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಕುಶಲಕರ್ಮಿಗಳಿಗೆ ಶೇಕಡ 90ರಷ್ಟು ಅಂದರೆ ರೂ.90000/-ಗಳ ಸಹಾಯಧನ ಇತರೆ ವರ್ಗದ ಕುಶಲಕರ್ಮಿಗಳಿಗೆ ಶೇಕಡ 60ರಷ್ಟು ಅಂದರೆ ರೂ.60000/-ಗಳ ಸಹಾಯಧನ ಮಂಜೂರು ಮಾಡಬಹುದಾಗಿದೆ.

**ಬಂಡವಾಳ ಹೂಡಿಕೆ ಸಹಾಯಧನ :**

ಗ್ರಾಮೀಣ ಪ್ರದೇಶದಲ್ಲಿ ಅನುಬಂಧದಲ್ಲಿ ಕಾಣಿಸಿದ ವೃತ್ತಿಪರ ಕುಶಲಕರ್ಮಿಗಳಿಗೆ ವೃತ್ತಿಯನ್ನು ಮುಂದುವರಿಸಿಕೊಂಡು ಹೋಗಲು ಅನುಕೂಲವಾಗುವಂತೆ ಯೋಜನಾ ವೆಚ್ಚದ ಮೇಲೆ ಶೇಕಡ 60ರಷ್ಟು ಗರಿಷ್ಟ ರೂ.10000/- ರವರೆಗೆ ಸಹಾಯಧನ ಹಾಗೂ ಉಳಿಕೆ ಯೋಜನಾ ವೆಚ್ಚವು ಬ್ಯಾಂಕಿನ ಸಾಲ ಹಾಗೂ ಕುಶಲ ಕರ್ಮಿಯ ವಂತಿಕೆಯಿಂದ ಪೂರೈಸುವುದು. ಈ ಸಂಬಂಧ ಯೋಜನಾ ವೆಚ್ಚವು ರೂ.30000/-ಕ್ಕಿಂತ ಮೀರಬಾರದು.

**ವಸ್ತುಪ್ರದರ್ಶನಗಳು :**

ಜಿಲ್ಲೆಯಲ್ಲಿ ಇರುವ ಸ್ವಸಹಾಯ ಗುಂಪಿಗೆ, ಸಣ್ಣ ಉದ್ಯಮಕ್ಕೆ (ಮೈಕ್ರೋ ಎಂಟರ್ ಪ್ರೈಸಸ್) ಕುಶಲಕರ್ಮಿಗಳಿಗೆ ಜಿಲ್ಲಾ ಮಟ್ಟದ, ರಾಜ್ಯ ಮಟ್ಟದ ಹಾಗೂ ರಾಷ್ಟ್ರಮಟ್ಟದ ವಿಚಾರಗೋಷ್ಠಿ, ತಾಂತ್ರಿಕತೆ ವಸ್ತು ಪ್ರದರ್ಶನ, ಮಾರಾಟ ವಸ್ತು ಪ್ರದರ್ಶನಗಳಲ್ಲಿ ಭಾಗವಹಿಸಲು ಅನುಕೂಲವಾಗುವಂತೆ ಭಾಗವಹಿಸುವ ಪ್ರತಿಯೊಬ್ಬರಿಗೆ ಈ ಕೆಳಕಂಡಂತೆ ಅವಕಾಶ ಇದೆ.

- ಪ್ರಯಾಣ ಭತ್ಯೆ : ಅನ್ವಯಿಸುವ ಬಸ್ಸು / ರೈಲು ದರ
- ದಿನದ ತುಟ್ಟಿಭತ್ಯೆ: ಆಯವ್ಯಯದ ಅನುದಾನ / ಸಿ ವರ್ಗದ ಉದ್ಯೋಗಿ
- ಕನಿಷ್ಟ 2 ಅಧಿಕಾರಿಗಳು ಭಾಗವಹಿಸಲು ಅವಕಾಶ ಇದೆ

**ಅಧ್ಯಯನ ಪ್ರವಾಸ :**

ಕುಶಲಕರ್ಮಿಗಳಿಗೆ ಅಧ್ಯಯನ ಪ್ರವಾಸ ಹಮ್ಮಿಕೊಳ್ಳಲು
ರಾಜ್ಯದಲ್ಲಿ – ರೂ.2000/-ಗಳ ಪ್ರತಿ ಕುಶಲಕರ್ಮಿಗೆ (ಗರಿಷ್ಟ 7 ದಿನಗಳು)
ಹೊರ ರಾಜ್ಯದಲ್ಲಿ – ರೂ.5000/-ಗಳು ಪ್ರತಿ ಕುಶಲಕರ್ಮಿಗೆ (ಗರಿಷ್ಟ 10 ರಿಂದ 15 ದಿನಗಳು)
ಮಾರಾಟ ಮೇಳದಲ್ಲಿ, ವಸ್ತು ಪ್ರದರ್ಶನಗಳಲ್ಲಿ ಮಳಿಗೆ ಸ್ಥಾಪಿಸಿ ಮಾರಾಟಕ್ಕೆ ಅನುಕೂಲ ಕಲ್ಪಿಸುವುದಕ್ಕೆ ರೂ.1.00 ರಿಂದ ರೂ.5.00 ಲಕ್ಷಗಳವರೆಗೆ ಕೇಂದ್ರ ಕಛೇರಿಯ ಅನುಮತಿ ಮೇರೆಗೆ ಖರ್ಚು ಮಾಡಬಹುದು.

**ಅತಿ ಸಣ್ಣ ಕೈಗಾರಿಕೆಗಳು ಸೇರಿದಂತೆ ಕುಶಲಕರ್ಮಿಗಳಿಗೆ ಬಡ್ಡಿ ಸಹಾಯಧನ ಮಂಜೂರಾತಿ.**

ಗ್ರಾಮಾಂತರ ಪ್ರದೇಶದಲ್ಲಿ ವಾಸವಾಗಿರುವ ಕುಶಲಕರ್ಮಿಗಳಿಗೆ / ಇತರೆ ವೃತ್ತಿಪರರಿಗೆ ಹಾಗೂ ಗುಡಿ ಕೈಗಾರಿಕೆಗಳಿಗೆ (ರೂ.5.00 ಲಕ್ಷ ಯೋಜನಾವೆಚ್ಚ ಮೀರಬಾರದು) ಹಣಕಾಸು / ಬ್ಯಾಂಕು / ಸಂಸ್ಥೆಗಳಿಂದ ವಿಧಿಸುವ ಬಡ್ಡಿಯ ಮೇಲೆ ಗರಿಷ್ಟ ಶೇಕಡ 5ರಷ್ಟು ಸಹಾಯಧನ ನೀಡಬಹುದಾಗಿದೆ. ಕುಶಲಕರ್ಮಿ / ಇತರೆ ವೃತ್ತಿಪರರಿಗೆ ಅಥವಾ ಗುಡಿ ಕೈಗಾರಿಕೆಗಳು ಪಡೆದಿರುವ ಸಾಲದ ಮೊತ್ತ ಗರಿಷ್ಟ ರೂ.5,00,000/-ಕ್ಕೆ ನಿಗಧಿಪಡಿಸಿದ ಬ್ಯಾಂಕು / ಹಣಕಾಸು ಸಂಸ್ಥೆಗಳು ವಿಧಿಸುವ ಶೇಕಡ 7% ಕ್ಕಿಂತ ಹೆಚ್ಚಿನ ಬಡ್ಡಿಯ ಬಾಬ್ತು ಹಣವನ್ನು ಮಾತ್ರ ಬಡ್ಡಿಯ ಸಹಯಧನ ನೀಡಬಹುದಾಗಿರುತ್ತದೆ. ಬಡ್ಡಿಯ ದರವು ಶೇಕಡ 12% ಕ್ಕಿಂತ ಹೆಚ್ಚಿಗೆ ಇದ್ದಲ್ಲಿ ಬಡ್ಡಿಯ ಸಹಾಯಧನ ಶೇಕಡ 5ಕ್ಕೆ ಸೀಮಿತವಾಗಿರುತ್ತದೆ. ಗರಿಷ್ಟ 5 ವರ್ಷದ ಅವಧಿ

**2. ವೃತ್ತಿಪರ ಕುಶಲಕರ್ಮಿಗಳಿಗೆ ಸುಧಾರಿತ ಉಪಕರಣಗಳ ಸರಬರಾಜು :**

ಗ್ರಾಮಾಂತರ ಪ್ರದೇಶದಲ್ಲಿರುವ ವಿವಿಧ ವೃತ್ತಿಯ ಕುಶಲಕರ್ಮಿಗಳು / ಇತರೆ ವೃತ್ತಿಪರರು ಹಳೆಯ ಮಾದರಿಯ ಹಾಗೂ ಹೆಚ್ಚು ಉತ್ಪಾದನೆಗೆ ಸಹಾಯಕವಲ್ಲದ ಉಪಕರಣಗಳನ್ನು ಉಪಯೋಗಿಸುತ್ತಿದ್ದು, ಸುಧಾರಿತ ಹಾಗೂ ಉತ್ತಮ ಉಪಕರಣಗಳನ್ನು ವಿತರಿಸುವ ಮೂಲಕ ಅವರನ್ನು ಆರ್ಥಿಕವಾಗಿ ಹೆಚ್ಚು ಸ್ವಾವಲಂಭಿಗಳನ್ನಾಗಿ ಮಾಡುವ ಉದ್ದೇಶದಿಂದ ಈ ಕಾರ್ಯಕ್ರಮದಡಿ ಚಟುವಟಿಕೆಗೆ ಅನುಗುಣವಾಗಿ ರೂ.3000/- ರಿಂದ ರೂ.5000/-ಗಳವರೆಗೆ ಒಳ್ಳೆಯ ಗುಣಮಟ್ಟದ ಸುಧಾರಿತ ಉಪಕರಣ ಸರಬರಾಜು ಮಾಡಬಹುದು.

# ಕರ್ನಾಟಕ ಕೈಗಾರಿಕಾ ನೀತಿ 2014–19

ಕರ್ನಾಟಕ ಕೈಗಾರಿಕಾ ನೀತಿಯು ದಿನಾಂಕ: 1/10/2014 ರಂದು ಜಾರಿಗೆ ಬಂದಿದ್ದು ಮುಂದಿನ ಐದು ವರ್ಷಗಳ ವರೆಗೆ ಅಥವಾ ಹೊಸ ಕೈಗಾರಿಕಾ ನೀತಿ ಜಾರಿಗೆ ಬರುವ ವರೆಗೆ ಜಾರಿಯಲ್ಲಿರುತ್ತದೆ. ಈ ಕರ್ನಾಟಕ ಕೈಗಾರಿಕಾ ನೀತಿಯನ್ವಯ ತಾಲ್ಲೂಕುಗಳನ್ನು ಈ ಕೆಳಗಿನಂತೆ ವರ್ಗೀಕರಿಸಲಾಗಿದೆ.

| ಸಂ | ಜಿಲ್ಲೆಗಳು | ತಾ. ಸಂ. | ಹೈ-ಕರ್ನಾಟಕ ಪ್ರದೇಶದ ತಾಲ್ಲೂಕುಗಳು | | ಹೈದರಾಬಾದ್-ಕರ್ನಾಟಕ ಪ್ರದೇಶ ಅಲ್ಲದ ತಾಲ್ಲೂಕುಗಳು | | | |
|---|---|---|---|---|---|---|---|---|
| | | | ಹೈ-ಕ ವಲಯ-1 | ಹೈ-ಕ ವಲಯ-2 | ವಲಯ-1 | ವಲಯ-2 | ವಲಯ-3 | ವಲಯ-4 |
| 1 | ಬೆಂಗಳೂರು (ನಗರ) | 4 | – | – | – | – | – | ಆನೇಕಲ್ |
| | | | | | | | | ಬೆಂಗಳೂರು (ಉ) |
| | | | | | | | | ಬೆಂಗಳೂರು (ದ) |
| | | | | | | | | ಬೆಂಗಳೂರು (ಪೂ) |
| 2 | ಬೆಂಗಳೂರು (ಗ್ರಾಮಾಂತರ) | 4 | | | | | | ದೇವನಹಳ್ಳಿ |
| | | | | | | | | ದೊಡ್ಡಬಳ್ಳಾಪುರ |
| | | | | | | | | ಹೊಸಕೋಟೆ |
| | | | | | | | | ನೆಲಮಂಗಲ |
| 3 | ರಾಮನಗರ | 4 | | | | | ಮಾಗಡಿ | ರಾಮನಗರ |
| | | | | | | | ಚನ್ನಪಟ್ಟಣ | |
| | | | | | | | ಕನಕಪುರ | |
| 4 | ಚಿತ್ರದುರ್ಗ | 6 | | | ಹೊಳಲ್ಕೆರೆ | ಹಿರಿಯೂರು | | |
| | | | | | | ಮೊಳಕಾಲ್ಮುರು | | |
| | | | | | | ಚಿತ್ರದುರ್ಗ | | |
| | | | | | | ಹೊಸದುರ್ಗ | ಚಳ್ಳಕೆರೆ | |
| 5 | ದಾವಣಗೆರೆ | 6 | | | ಚನ್ನಗಿರಿ | ಹೊನ್ನಾಳಿ | ದಾವಣಗೆರೆ | |
| | | | | | ಜಗಳೂರು | | ಹರಿಹರ | |
| | | | | | ಹರಪನಹಳ್ಳಿ | | | |
| 6 | ಚಿಕ್ಕಬಳ್ಳಾಪುರ | 6 | | | ಗುಡಿಬಂಡೆ | ಚಿಂತಾಮಣಿ | ಗೌರಿಬಿದನೂರು | |
| | | | | | ಬಾಗೇಪಲ್ಲಿ | ಚಿಕ್ಕಬಳ್ಳಾಪುರ | ಶಿಡ್ಲಘಟ್ಟ | |
| 7 | ಕೋಲಾರ | 5 | | | ಮುಳಬಾಗಿಲು | | ಕೋಲಾರ | |
| | | | | | ಶ್ರೀನಿವಾಸಪುರ | | ಬಂಗಾರಪೇಟೆ | |
| | | | | | | | ಮಾಲೂರು | |
| 8 | ಶಿವಮೊಗ್ಗ | 7 | | | ಸೊರಬ | ಹೊಸನಗರ | ಶಿವಮೊಗ್ಗ | |
| | | | | | | | ಭದ್ರಾವತಿ | |
| | | | | | | | ಸಾಗರ | |
| | | | | | | | ಶಿಕಾರಿಪುರ | |
| | | | | | | | ತೀರ್ಥಹಳ್ಳಿ | |
| 9 | ತುಮಕೂರು | 10 | | | | ಮಧುಗಿರಿ | ತುಮಕೂರು | |
| | | | | | | ಕೊರಟಗೆರೆ | ತುರುವೇಕೆರೆ | |
| | | | | | | ಗುಬ್ಬಿ | ತಿಪಟೂರು | |
| | | | | | | ಸಿರಾ | ಚಿಕ್ಕನಾಯ್ಕನಹಳ್ಳಿ | |
| | | | | | | ಪಾವಗಡ | ಕುಣಿಗಲ್ | |
| 10 | ಚಾಮರಾಜನಗರ | 4 | | | ಯಳಂದೂರು | ಕೊಳ್ಳೆಗಾಲ | | |
| | | | | | ಗುಂಡ್ಲುಪೇಟೆ | ಚಾಮರಾಜನಗರ | | |
| 11 | ಚಿಕ್ಕಮಗಳೂರು | 7 | | | | ಕಡೂರು | ಚಿಕ್ಕಮಗಳೂರು | |
| | | | | | | ತರಿಕೆರೆ | ಶ್ರೀಂಗೇರಿ | |
| | | | | | | | ಕೊಪ್ಪ | |
| | | | | | | | ಎನ್.ಆರ್.ಪುರ | |
| 12 | ದಕ್ಷಿಣಕನ್ನಡ | 5 | | | | ಬಂಟ್ವಾಳ | ಮಂಗಳೂರು | |
| | | | | | | | ಪುತ್ತೂರು | |
| | | | | | | | ಸುಳ್ಯ | |
| | | | | | | | ಬೆಳ್ತಂಗಡಿ | |
| 13 | ಹಾಸನ | 8 | | | ಅರಕಲಗೂಡು | ಅರಸೀಕೆರೆ | ಹಾಸನ | |
| | | | | | ಬೇಲೂರು | ಚನ್ನರಾಯಪಟ್ಟಣ | ಸಕಲೇಶಪುರ | |
| | | | | | | ಹೊಳೆನರಸೀಪುರ | | |
| | | | | | | ಆಲೂರು | | |
| 14 | ಕೊಡಗು | 3 | | | ವೀರಾಜಪೇಟೆ | ಮಡಿಕೇರಿ | | |
| | | | | | | ಸೋಮವಾರಪೇಟೆ | | |
| 15 | ಮಂಡ್ಯ | 7 | | | ಮಳವಳ್ಳಿ | ಶ್ರೀರಂಗಪಟ್ಟಣ | ಮಂಡ್ಯ | |
| | | | | | | ನಾಗಮಂಗಳ | ಮದ್ದೂರು | |
| | | | | | | ಕೆ.ಆರ್.ಪೇಟೆ | | |
| | | | | | | ಪಾಂಡವಪುರ | | |
| 16 | ಮೈಸೂರು | 7 | | | ಪಿರಿಯಾಪಟ್ಟಣ | ಹುಣಸೂರು | ಮೈಸೂರು | |

| ಸಂ | ಜಿಲ್ಲೆಗಳು | ತಾ. ಸಂ. | ಹೈ–ಕರ್ನಾಟಕ ಪ್ರದೇಶದ ತಾಲ್ಲೂಕುಗಳು | | ಹೈದರಾಬಾದ್–ಕರ್ನಾಟಕ ಪ್ರದೇಶ ಅಲ್ಲದ ತಾಲ್ಲೂಕುಗಳು | | | |
|---|---|---|---|---|---|---|---|---|
| | | | ಹೈ–ಕ ವಲಯ–1 | ಹೈ–ಕ ವಲಯ–2 | ವಲಯ–1 | ವಲಯ–2 | ವಲಯ–3 | ವಲಯ–4 |
| | | | | | ಹೆಚ್.ಡಿ.ಕೋಟೆ | ಟಿ.ನರಸೀಪುರ | ನಂಜನಗೂಡು | |
| | | | | | | ಕೆ.ಆರ್.ನಗರ | | |
| 17 | ಉಡುಪಿ | 3 | | | | | ಉಡುಪಿ | |
| | | | | | | | ಕುಂದಾಪುರ | |
| | | | | | | | ಕಾರ್ಕಳ | |
| 18 | ಬಾಗಲಕೋಟೆ | 6 | | | | ಬಿಳಗಿ | ಬಾಗಲಕೋಟೆ | |
| | | | | | | ಬಾದಾಮಿ | ಮುಧೋಳ | |
| | | | | | | | ಜಮಖಂಡಿ | |
| | | | | | | | ಹುನಗುಂದ | |
| 19 | ಬೆಳಗಾವಿ | 10 | | | | ಬೈಲಹೊಂಗಲ | ಬೆಳಗಾವಿ | |
| | | | | | | ಸವದತ್ತಿ | ಅಥಣಿ | |
| | | | | | | ಚಿಕ್ಕೋಡಿ | ಹುಕ್ಕೇರಿ | |
| | | | | | | ರಾಯಬಾಗ | ಗೋಕಾಕ | |
| | | | | | | | ಖಾನಾಪುರ | |
| | | | | | | | ರಾಮದುರ್ಗ | |
| 20 | ವಿಜಯಪುರ | 5 | | | ಮುದ್ದೇಬಿಹಾಳ | ಸಿಂಧಗಿ | | |
| | | | | | ಬಿ.ಬಾಗೇವಾಡಿ | ಇಂಡಿ | | |
| | | | | | | ವಿಜಯಪುರ | | |
| 21 | ಧಾರವಾಡ | 5 | | | | ನವಲಗುಂದ | ಧಾರವಾಡ | |
| | | | | | | | ಹುಬ್ಬಳ್ಳಿ | |
| | | | | | | | ಕಲಘಟಗಿ | |
| | | | | | | | ಕುಂದಗೋಳ | |
| 22 | ಗದಗ | 5 | | | ನರಗುಂದ | ಮುಂಡರಗಿ | ಗದಗ | |
| | | | | | ರೋಣ | | ಶಿರಹಟ್ಟಿ | |
| 23 | ಹಾವೇರಿ | 7 | | | ಹಿರೆಕೆರೂರು | ಸವಣೂರು | ರಾಣೆಬೆನ್ನೂರು | |
| | | | | | ಹಾನಗಲ್ | ಶಿಗ್ಗಾಂವಿ | ಬ್ಯಾಡಗಿ | |
| | | | | | | ಹಾವೇರಿ | | |
| 24 | ಉತ್ತರಕನ್ನಡ | 11 | | | | ಹೊನ್ನಾವರ | ಕಾರವಾರ | |
| | | | | | | ಸಿರಸಿ | ಹಳಿಯಾಳ | |
| | | | | | | ಮುಂಡಗೋಡ | ಸೂಪ | |
| | | | | | | ಯಲ್ಲಾಪುರ | ಭಟ್ಕಳ | |
| | | | | | | ಸಿದಾಪುರ | ಅಂಕೋಲ | |
| | | | | | | | ಕುಮಟಾ | |
| 25 | ಬಳ್ಳಾರಿ | 7 | ಹೆಚ್.ಬಿ.ಹಳ್ಳಿ | ಬಳ್ಳಾರಿ | | | | |
| | | | ಹಡಗಲಿ | ಹೊಸಪೇಟೆ | | | | |
| | | | ಕೂಡ್ಲಿಗಿ | ಸಂಡೂರು | | | | |
| | | | | ಸಿರುಗುಪ್ಪ | | | | |
| 26 | ಬೀದರ | 5 | ಭಾಲ್ಕಿ | ಬೀದರ್ | | | | |
| | | | ಹುಮ್ನಾಬಾದ್ | | | | | |
| | | | ಬಸವಕಲ್ಯಾಣ | | | | | |
| | | | ಔರಾದ | | | | | |
| 27 | ಕಲಬುರುಗಿ | 7 | ಕಲಬುರುಗಿ | ಸೇಡಂ | | | | |
| | | | ಅಫ್ಜಲ್‌ಪುರ | ಚಿತ್ತಾಪುರ | | | | |
| | | | ಅಳಂದ | ಚಿಂಚೋಳಿ | | | | |
| | | | ಜೇವರ್ಗಿ | | | | | |
| 28 | ಯಾದಗಿರಿ | 3 | ಯಾದಗಿರಿ | | | | | |
| | | | ಶಹಾಪುರ | | | | | |
| | | | ಶೋರಾಪುರ | | | | | |
| 29 | ಕೊಪ್ಪಳ | 4 | ಕುಷ್ಟಗಿ | ಕೊಪ್ಪಳ | | | | |
| | | | ಯಲಬುರ್ಗಾ | ಗಂಗಾವತಿ | | | | |
| 30 | ರಾಯಚೂರು | 5 | ಸಿಂಧನೂರು | ರಾಯಚೂರು | | | | |
| | | | ಮಾನ್ವಿ | | | | | |
| | | | ಲಿಂಗಸೂಗೂರು | | | | | |
| | | | ದೇವದುರ್ಗ | | | | | |
| | **ಒಟ್ಟು** | **176** | **20** | **11** | **23** | **51** | **62** | **9** |

**ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಪ್ರೋತ್ಸಾಹಗಳು ಮತ್ತು ರಿಯಾಯಿತಿಗಳು:**

1. **ಬಂಡವಾಳ ಹೂಡಿಕೆ ಸಹಾಯಧನ (ರೂ.ಲಕ್ಷಗಳಲ್ಲಿ)–ಅತಿಸಣ್ಣ ಕೈಗಾರಿಕೆಗಳಿಗೆ**

| ವರ್ಗ | | | ಹೈದರಾಬಾದ್–ಕರ್ನಾಟಕ ಅಲ್ಲದ ಪ್ರದೇಶ | | | | ಹೈ–ಕರ್ನಾಟಕ ಪ್ರದೇಶ | |
|---|---|---|---|---|---|---|---|---|
| | | | ವಲಯ 1 | ವಲಯ 2 | ವಲಯ 3 | ವಲಯ 4 | ವಲಯ 1 | ವಲಯ 2 |
| ಸಾಮಾನ್ಯ | | % | 25% | 20% | 15% | ಇಲ್ಲ | 30% | 25% |
| | | ಗರಿಷ್ಠ | ರೂ.15.00 | ರೂ.12.00 | ರೂ. 9.00 | ಇಲ್ಲ | ರೂ.18.00 | ರೂ.15.00 |
| ಅ.ಸಂ, ಹಿಂ.ವ, ವಿ.ಚೇ, ಮಾ.ಸೈ. | | % | 30% | 25% | 20% | ಇಲ್ಲ | 35% | 30% |
| | | ಗರಿಷ್ಠ | ರೂ.17.00 | ರೂ.15.00 | ರೂ.12.00 | ಇಲ್ಲ | ರೂ.20.00 | ರೂ.18.00 |
| ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ | | % | 30% | 25% | 20% | 10% | 35% | 30% |
| | | ಗರಿಷ್ಠ | ರೂ.18.00 | ರೂ.15.00 | ರೂ. 12.00 | ರೂ. 8.00 | ರೂ.20.00 | ರೂ.18.00 |
| ಮಹಿಳೆ | ಇತರೆ | % | 30% | 25% | 20% | 10% | 35% | 30% |
| | | ಗರಿಷ್ಠ | ರೂ.18.00 | ರೂ.15.00 | ರೂ. 12.00 | ರೂ. 8.00 | ರೂ.20.00 | ರೂ.18.00 |
| | ಪ.ಜಾ ಪ.ಪಂ | % | 35% | 30% | 25% | 15% | 40% | 35% |
| | | ಗರಿಷ್ಠ | ರೂ.20.00 | ರೂ.18.00 | ರೂ.15.00 | ರೂ. 12.00 | ರೂ.22.00 | ರೂ.20.00 |

2. **ಬಂಡವಾಳ ಹೂಡಿಕೆ ಸಹಾಯಧನ (ರೂ.ಲಕ್ಷಗಳಲ್ಲಿ)–ಸಣ್ಣ ಕೈಗಾರಿಕೆಗಳಿಗೆ**

| ವರ್ಗ | | | ಹೈದರಾಬಾದ್–ಕರ್ನಾಟಕ ಅಲ್ಲದ ಪ್ರದೇಶ | | | | ಹೈ–ಕರ್ನಾಟಕ ಪ್ರದೇಶ | |
|---|---|---|---|---|---|---|---|---|
| | | | ವಲಯ 1 | ವಲಯ 2 | ವಲಯ 3 | ವಲಯ 4 | ವಲಯ 1 | ವಲಯ 2 |
| ಸಾಮಾನ್ಯ | | % | 20% | 15% | 10% | ಇಲ್ಲ | 25% | 20% |
| | | ಗರಿಷ್ಠ | ರೂ.40.00 | ರೂ.30.00 | ರೂ.20.00 | ಇಲ್ಲ | ರೂ.45.00 | ರೂ.40.00 |
| ಅ.ಸಂ, ಹಿಂ.ವ, ವಿ.ಚೇ, ಮಾ.ಸೈ. | | % | 25% | 20% | 15% | ಇಲ್ಲ | 30% | 25% |
| | | ಗರಿಷ್ಠ | ರೂ.45.00 | ರೂ.35.00 | ರೂ.25.00 | ಇಲ್ಲ | ರೂ.50.00 | ರೂ.45.00 |
| ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ | | % | 25% | 20% | 15% | 10% | 30% | 25% |
| | | ಗರಿಷ್ಠ | ರೂ.45.00 | ರೂ.35.00 | ರೂ.25.00 | ರೂ.10.00 | ರೂ.50.00 | ರೂ.45.00 |
| ಮಹಿಳೆ | ಇತರೆ | % | 25% | 20% | 15% | 10% | 30% | 25% |
| | | ಗರಿಷ್ಠ | ರೂ.45.00 | ರೂ.35.00 | ರೂ.25.00 | ರೂ.10.00 | ರೂ.50.00 | ರೂ.45.00 |
| | ಪ.ಜಾ ಪ.ಪಂ | % | 30% | 25% | 20% | 15% | 35% | 30% |
| | | ಗರಿಷ್ಠ | ರೂ.50.00 | ರೂ.40.00 | ರೂ.30.00 | ರೂ.15.00 | ರೂ.55.00 | ರೂ.50.00 |

3. **ಬಂಡವಾಳ ಹೂಡಿಕೆ ಸಹಾಯಧನ (ರೂ.ಲಕ್ಷಗಳಲ್ಲಿ)–ಮಧ್ಯಮ ಕೈಗಾರಿಕೆಗಳಿಗೆ**

| ವರ್ಗ | | ಹೈದರಾಬಾದ್–ಕರ್ನಾಟಕ ಅಲ್ಲದ ಪ್ರದೇಶ | | | | ಹೈ–ಕರ್ನಾಟಕ ಪ್ರದೇಶ | |
|---|---|---|---|---|---|---|---|
| | | ವಲಯ 1 | ವಲಯ 2 | ವಲಯ 3 | ವಲಯ 4 | ವಲಯ 1 | ವಲಯ 2 |
| ಸಾಮಾನ್ಯ | | ರೂ.50.00 | ರೂ.40.00 | ರೂ.30.00 | ಇಲ್ಲ | ರೂ.55.00 | ರೂ.50.00 |
| ಅ.ಸಂ, ಹಿಂ.ವ, ವಿ.ಚೇ, ಮಾ.ಸೈ. | | ರೂ.55.00 | ರೂ.45.00 | ರೂ.35.00 | ಇಲ್ಲ | ರೂ.60.00 | ರೂ.55.00 |
| ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ | | ರೂ.55.00 | ರೂ.45.00 | ರೂ.35.00 | ರೂ.20.00 | ರೂ.60.00 | ರೂ.55.00 |
| ಮಹಿಳೆ | ಇತರೆ | ರೂ.55.00 | ರೂ.45.00 | ರೂ.35.00 | ರೂ.20.00 | ರೂ.60.00 | ರೂ.55.00 |
| | ಪ.ಜಾತಿ, ಪ.ವರ್ಗ | ರೂ.60.00 | ರೂ.50.00 | ರೂ.40.00 | ರೂ.25.00 | ರೂ.65.00 | ರೂ.60.00 |

1. **ಮುದ್ರಾಂಕ ಶುಲ್ಕ ವಿನಾಯಿತಿ ಮತ್ತು ನೊಂದಣಿ ದರ ರಿಯಾಯಿತಿ– ಎಂ.ಎಸ್.ಎಂ.ಇ ಗಳಿಗೆ**

| ವರ್ಗ | | ಹೈದರಾಬಾದ್–ಕರ್ನಾಟಕ ಅಲ್ಲದ ಪ್ರದೇಶ | | | | ಹೈ–ಕರ್ನಾಟಕ ಪ್ರದೇಶ | |
|---|---|---|---|---|---|---|---|
| | | ವಲಯ 1 | ವಲಯ 2 | ವಲಯ 3 | ವಲಯ 4 | ವಲಯ 1 | ವಲಯ 2 |
| ಸಾಮಾನ್ಯ | ಮು.ಶು.ವಿ | 100% | 100% | 75% | ಇಲ್ಲ | 100% | 100% |
| | ನೊಂ.ದ.ರಿ | ರೂ. 1.00/<br>ರೂ. 1000 | ರೂ. 1.00/<br>ರೂ. 1000 | ರೂ. 1.00/<br>ರೂ. 1000 | ಇಲ್ಲ | ರೂ. 1.00/<br>ರೂ. 1000 | ರೂ. 1.00/<br>ರೂ. 1000 |
| ಅ.ಸಂ, ಹಿಂ.ವ, ವಿ.ಚೇ, ಮಾ.ಸೈ. | ಮು.ಶು.ವಿ | 100% | 100% | 100% | ಇಲ್ಲ | 100% | 100% |
| | ನೊಂ.ದ.ರಿ | ರೂ. 0.50/<br>ರೂ. 1000 | ರೂ. 0.50/<br>ರೂ. 1000 | ರೂ. 0.50/<br>ರೂ. 1000 | ಇಲ್ಲ | ರೂ. 0.50/<br>ರೂ. 1000 | ರೂ. 0.50/<br>ರೂ. 1000 |
| ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗ | ಮು.ಶು.ವಿ | 100% | 100% | 100% | 75% | 100% | 100% |
| | ನೊಂ.ದ.ರಿ | ರೂ. 0.50/<br>ರೂ. 1000 | ರೂ. 0.50/<br>ರೂ. 1000 | ರೂ. 0.50/<br>ರೂ. 1000 | ರೂ. 0.50/<br>ರೂ. 1000 | ರೂ. 0.50/<br>ರೂ. 1000 | ರೂ. 0.50/<br>ರೂ. 1000 |
| ಮಹಿಳೆ | ಮು.ಶು.ವಿ | 100% | 100% | 100% | 75% | 100% | 100% |
| | ನೊಂ.ದ.ರಿ | ರೂ. 0.50/<br>ರೂ. 1000 | ರೂ. 0.50/<br>ರೂ. 1000 | ರೂ. 0.50/<br>ರೂ. 1000 | ರೂ. 0.50/<br>ರೂ. 1000 | ರೂ. 0.50/<br>ರೂ. 1000 | ರೂ. 0.50/<br>ರೂ. 1000 |

2. **ಭೂಪರಿವರ್ತನ ಶುಲ್ಕ ಮರುಪಾವತಿ – ಎಂ.ಎಸ್.ಎಂ.ಇ ಗಳಿಗೆ**

| ವರ್ಗ | ಹೈದರಾಬಾದ್–ಕರ್ನಾಟಕ ಅಲ್ಲದ ಪ್ರದೇಶ | | | | ಹೈ–ಕರ್ನಾಟಕ ಪ್ರದೇಶ | |
|---|---|---|---|---|---|---|
| | ವಲಯ 1 | ವಲಯ 2 | ವಲಯ 3 | ವಲಯ 4 | ವಲಯ 1 | ವಲಯ 2 |
| ಉಜಟಿ | 100% | 100% | 75% | ಇಲ್ಲ | 100% | 100% |
| ಅ.ಸಂ, ಹಿಂ.ವ, ವಿ.ಚೇ, ಮಾ.ಸೈ. | 100% | 100% | 100% | ಇಲ್ಲ | 100% | 100% |
| ಪರಿಶಿಷ್ಟ ಜಾತಿ /ಪರಿಶಿಷ್ಟ ವರ್ಗ | 100% | 100% | 100% | 75% | 100% | 100% |
| ಮಹಿಳೆ | 100% | 100% | 100% | 75% | 100% | 100% |

**ತ್ಯಾಜ್ಯನೀರು ಸಂಸ್ಕರಣಾ ಘಟಕಗಳ ನಿರ್ಮಾಣಕ್ಕೆ ಸಹಾಯಧನ– ತಯಾರಿಕಾ ಎಂ.ಎಸ್.ಎಂ.ಇ ಗಳಿಗೆ**

| ವರ್ಗ | ಹೈ–ಕರ್ನಾಟಕ ಅಲ್ಲದ ಪ್ರದೇಶ (ವಲಯ 1,2 & 3 ಮಾತ್ರ) | ಹೈ–ಕರ್ನಾಟಕ ಪ್ರದೇಶ (ವಲಯ 1 & 2) |
|---|---|---|
| ಸಾಮಾನ್ಯ | 50%– ರೂ.25 ಲಕ್ಷಗಳು | 50%– ರೂ.50 ಲಕ್ಷಗಳು |
| ಅ.ಸಂ, ಹಿಂ.ವ, ವಿ.ಚೇ, ಮಾ.ಸೈ. ಪ.ಜಾತಿ, ಪ.ವರ್ಗ, ಮಹಿಳೆ | 75%– ರೂ.50 ಲಕ್ಷಗಳು | 75%– ರೂ.100 ಲಕ್ಷಗಳು |

**ಬಡ್ಡಿ ಸಹಾಯಧನ– ಅತಿಸಣ್ಣ ಕೈಗಾರಿಕೆಗಳಿಗೆ ಮಾತ್ರ**

| ವರ್ಗ | ಬಡ್ಡಿ ಸಹಾಯಧನ | ಹೈದರಾಬಾದ್–ಕರ್ನಾಟಕ ಅಲ್ಲದ ಪ್ರದೇಶ | | | | ಹೈ–ಕರ್ನಾಟಕ ಪ್ರದೇಶ | |
|---|---|---|---|---|---|---|---|
| | | ವಲಯ 1 | ವಲಯ 2 | ವಲಯ 3 | ವಲಯ 4 | ವಲಯ 1 | ವಲಯ 2 |
| ಸಾಮಾನ್ಯ | 5% | 6 ವರ್ಷ | 5 ವರ್ಷ | 4 ವರ್ಷ | ಇಲ್ಲ | 7 ವರ್ಷ | 6 ವರ್ಷ |
| ಅ.ಸಂ, ಹಿಂ.ವ, ವಿ.ಚೇ, ಮಾ.ಸೈ. ಪ.ಜಾ, ಪ.ವ, ಮಹಿಳೆ | 6% | 6 ವರ್ಷ | 5 ವರ್ಷ | 4 ವರ್ಷ | ಇಲ್ಲ | 7 ವರ್ಷ | 6 ವರ್ಷ |

**ವಿದ್ಯುತ್ ದರ ತೆರಿಗೆ ವಿನಾಯಿತಿ (ಎಂ.ಎಸ್.ಎಂ.ಇ ತಯಾರಿಕಾ ಘಟಕಗಳಿಗೆ ಮಾತ್ರ)**

| ವರ್ಗ | % | ಹೈದರಾಬಾದ್–ಕರ್ನಾಟಕ ಅಲ್ಲದ ಪ್ರದೇಶ | | | | ಹೈ–ಕರ್ನಾಟಕ ಪ್ರದೇಶ | |
|---|---|---|---|---|---|---|---|
| | | ವಲಯ 1 | ವಲಯ 2 | ವಲಯ 3 | ವಲಯ 4 | ವಲಯ 1 | ವಲಯ 2 |
| ಸಾಮಾನ್ಯ | 100% | 6 ವರ್ಷ | 5 ವರ್ಷ | 4 ವರ್ಷ | ಇಲ್ಲ | 7 ವರ್ಷ | 6 ವರ್ಷ |
| ಅ.ಸಂ, ಹಿಂ.ವ, ವಿ.ಚೇ, ಮಾ.ಸೈ. ಪ.ಜಾತಿ, ಪ.ವರ್ಗ, ಮಹಿಳೆ | 100% | 7 ವರ್ಷ | 6 ವರ್ಷ | 5 ವರ್ಷ | 4 ವರ್ಷ | 8 ವರ್ಷ | 7 ವರ್ಷ |

**ತಂತ್ರಜ್ಞಾನ ಉನ್ನತೀಕರಣ, ಗುಣಮಟ್ಟ ಪ್ರಮಾಣೀಕರಣ : (ಎಂ.ಎಸ್.ಎಂ.ಇ ಉತ್ಪಾದನಾ ಘಟಕಗಳು):**

**ತಂತ್ರಜ್ಞಾನ ಉನ್ನತೀಕರಣ ಸಾಲದ ಮೇಲೆ ಬಡ್ಡಿ ಸಹಾಯಧನ:**

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಅಥವಾ ಶೆಡ್ಯೂಲ್ಡ್ ವಾಣಿಜ್ಯ ಬ್ಯಾಂಕ್‌ಗಳಿಂದ ಕೇಂದ್ರ ಸರ್ಕಾರದ ಸಿ.ಎಸ್.ಸಿ.ಎಸ್.ಎಸ್ ಯೋಜನೆ ಹೊರತುಪಡಿಸಿ ಪಡೆದ ಸಾಲದ ಮೇಲೆ.

| ವರ್ಗ | ಹೈ–ಕರ್ನಾಟಕ ಅಲ್ಲದ ಪ್ರದೇಶ (ವಲಯ1, 2 & 3 ಮಾತ್ರ) ಹಾಗೂ ಹೈ–ಕರ್ನಾಟಕ ಪ್ರದೇಶ (ವಲಯ 1 &2) |
|---|---|
| ಸಾಮಾನ್ಯ | 5% |
| ಅ.ಸಂ, ಹಿಂ.ವ, ವಿ.ಚೇ, ಮಾ.ಸೈ. ಪ.ಜಾತಿ, ಪ.ವರ್ಗ, ಮಹಿಳೆ | 5% |

**ಐ.ಎಸ್.ಓ ಪ್ರಮಾಣೀಕರಣ:**

| ವರ್ಗ | ಹೈ–ಕರ್ನಾಟಕ ಅಲ್ಲದ ಪ್ರದೇಶ (ವಲಯ1, 2 & 3 ಮಾತ್ರ) ಹಾಗೂ ಹೈ–ಕರ್ನಾಟಕ ಪ್ರದೇಶ (ವಲಯ 1 &2) |
|---|---|
| ಸಾಮಾನ್ಯ | ಶೇ 75% ರಷ್ಟು ವೆಚ್ಚ (ಗರಿಷ್ಟ ರೂ.75,000) |
| ಅ.ಸಂ, ಹಿಂ.ವ, ವಿ.ಚೇ, ಮಾ.ಸೈ. ಪ.ಜಾತಿ, ಪ.ವರ್ಗ, ಮಹಿಳೆ | ಶೇ 75% ರಷ್ಟು ವೆಚ್ಚ (ಗರಿಷ್ಟ ರೂ.1,00,000) |

**ಬಿ.ಐ.ಎಸ್. ಪ್ರಮಾಣೀಕರಣ**

| ವರ್ಗ | ಹೈದರಾಬಾದ್–ಕರ್ನಾಟಕ ಅಲ್ಲದ ಪ್ರದೇಶ (ವಲಯ1, 2 & 3 ಮಾತ್ರ) ಹಾಗೂ ಹೈದರಾಬಾದ್–ಕರ್ನಾಟಕ ಪ್ರದೇಶ (ವಲಯ 1 &2) |
|---|---|
| ಸಾಮಾನ್ಯ | ಬಿ.ಎಸ್.ಐ ಗೆ ನೀಡಬೇಕಾದ ಶುಲ್ಕದ ಶೇ 50% (ಗರಿಷ್ಟ ರೂ.20,000) ಮತ್ತು ಬಿ.ಎಸ್.ಐ. ಪ್ರಮಾಣೀಕೃತ ಪರೀಕ್ಷಾ ಉಪಕರಣಗಳನ್ನು ಖರೀದಿಸಲು ಭರಿಸಿದ ವೆಚ್ಚದ ಶೇ 25% ರಷ್ಟು (ಗರಿಷ್ಟ ರೂ.50,000) |
| ಅ.ಸಂ, ಹಿಂ.ವ, ವಿ.ಚೇ, ಮಾ.ಸೈ. ಪ.ಜಾತಿ, ಪ.ವರ್ಗ, ಮಹಿಳೆ | ಬಿ.ಎಸ್.ಐ ಗೆ ನೀಡಬೇಕಾದ ಶುಲ್ಕದ ಶೇ 50% (ಗರಿಷ್ಟ ರೂ.20,000) ಮತ್ತು ಬಿ.ಎಸ್.ಐ. ಪ್ರಮಾಣೀಕೃತ ಪರೀಕ್ಷಾ ಉಪಕರಣಗಳನ್ನು ಖರೀದಿಸಲು ಭರಿಸಿದ ವೆಚ್ಚದ ಶೇ 25% ರಷ್ಟು (ಗರಿಷ್ಟ ರೂ.1,00,000) |

**ತಂತ್ರಜ್ಞಾನ ಅಳವಡಿಕೆ:**

ಗುರುತಿಸಲ್ಪಟ್ಟ ರಾಷ್ಟ್ರೀಯ ಪ್ರಯೋಗಾಲಯಳಿಂದ ಪಡೆದ ತಂತ್ರಜ್ಞಾನವನ್ನು ಅಳವಡಿಸಿಕೊಂಡಿದ್ದಕ್ಕಾಗಿ

| ವರ್ಗ | ಹೈ –ಕರ್ನಾಟಕ ಅಲ್ಲದ ಪ್ರದೇಶ (ವಲಯ1, 2 & 3 ಮಾತ್ರ) ಹಾಗೂ ಹೈ–ಕರ್ನಾಟಕ ಪ್ರದೇಶ (ವಲಯ 1 &2) |
|---|---|
| ಸಾಮಾನ್ಯ | ಶೇ 25% ರಷ್ಟು ವೆಚ್ಚ (ಗರಿಷ್ಟ ರೂ.50,000) |
| ಅ.ಸಂ, ಹಿಂ.ವ, ವಿ.ಚೇ, ಮಾ.ಸೈ. ಪ.ಜಾತಿ, ಪ.ವರ್ಗ, ಮಹಿಳೆ | ಶೇ 50% ರಷ್ಟು ವೆಚ್ಚ (ಗರಿಷ್ಟ ರೂ.1,00,000) |

**ತಂತ್ರಜ್ಞಾನ ಬ್ಯುಸಿನೆಸ್ ಇಂಕುಬೇಶನ್ ಸೆಂಟರ್:**

| ವರ್ಗ | ಹೈ–ಕರ್ನಾಟಕ ಅಲ್ಲದ ಪ್ರದೇಶ (ವಲಯ1, 2 & 3 ಮಾತ್ರ) ಹಾಗೂ ಹೈ–ಕರ್ನಾಟಕ ಪ್ರದೇಶ (ವಲಯ 1 &2) |
|---|---|
| ಸಾಮಾನ್ಯ | ಶೇ 25% ರಷ್ಟು ಯೋಜನಾ ವೆಚ್ಚ (ಗರಿಷ್ಟ ರೂ.50.00 ಲಕ್ಷ) |
| ಅ.ಸಂ, ಹಿಂ.ವ, ವಿ.ಚೇ, ಮಾ.ಸೈ. ಪ.ಜಾತಿ, ಪ.ವರ್ಗ, ಮಹಿಳೆ | ಶೇ 50% ರಷ್ಟು ಯೋಜನಾ ವೆಚ್ಚ (ಗರಿಷ್ಟ ರೂ.75.00 ಲಕ್ಷ) |

**ಎಲೆಕ್ಟ್ರಾನಿಕ್ ಕಸ ಮತ್ತು ಪ್ಲಾಸ್ಟಿಕ್ ಕಸದ ಪುನರ್‌ಬಳಕೆ:**

| ವರ್ಗ | ಹೈ–ಕರ್ನಾಟಕ ಅಲ್ಲದ ಪ್ರದೇಶ (ವಲಯ1, 2 & 3 ಮಾತ್ರ) ಹಾಗೂ ಹೈ–ಕರ್ನಾಟಕ ಪ್ರದೇಶ (ವಲಯ 1 &2) |
|---|---|
| ಸಾಮಾನ್ಯ | ಶೇ 5% ರಷ್ಟು (ಗರಿಷ್ಟ ಮಿತಿ ರೂ.10 ಲಕ್ಷ) |
| ಅ.ಸಂ, ಹಿಂ.ವ, ವಿ.ಚೇ, ಮಾ.ಸೈ. ಪ.ಜಾತಿ, ಪ.ವರ್ಗ, ಮಹಿಳೆ | ಶೇ 5% ರಷ್ಟು (ಗರಿಷ್ಟ ಮಿತಿ ರೂ.15 ಲಕ್ಷ) |

**ನೀರು ಕೊಯ್ಲು / ಸಂರಕ್ಷಣಾ ಕ್ರಮಗಳು :**

| | |
|---|---|
| ಸಾಮಾನ್ಯ | ಮಳೆ ನೀರು ಕೊಯ್ಲು : ಯಂತ್ರೋಪಕರಣಗಳ ವೆಚ್ಚದ ಶೇ 50% (ಗರಿಷ್ಟ ರೂ.1.00 ಲಕ್ಷ) |
| | ತ್ಯಾಜ್ಯ ನೀರು ಪುನರ್‌ಬಳಕೆ : ಯಂತ್ರೋಪಕರಣಗಳ ವೆಚ್ಚದ ಶೇ 50% (ಗರಿಷ್ಟ ರೂ.5.00 ಲಕ್ಷ) |
| | ಶೂನ್ಯ ಹೊರಸೂಸುವಿಕೆ : ಯಂತ್ರೋಪಕರಣಗಳ ವೆಚ್ಚದ ಶೇ 50% (ಗರಿಷ್ಟ ರೂ.5.00 ಲಕ್ಷ) |
| ಅ.ಸಂ, ಹಿಂ.ವ, ವಿ.ಚೇ, ಮಾ.ಸೈ. ಪ.ಜಾತಿ, ಪ.ವರ್ಗ, ಮಹಿಳೆ | ಮಳೆ ನೀರು ಕೊಯ್ಲು : ಯಂತ್ರೋಪಕರಣಗಳ ವೆಚ್ಚದ ಶೇ 50% (ಗರಿಷ್ಟ ರೂ.1.50 ಲಕ್ಷ) |
| | ತ್ಯಾಜ್ಯ ನೀರು ಪುನರ್‌ಬಳಕೆ : ಯಂತ್ರೋಪಕರಣಗಳ ವೆಚ್ಚದ ಶೇ 50% (ಗರಿಷ್ಟ ರೂ.7.50 ಲಕ್ಷ) |
| | ಶೂನ್ಯ ಹೊರಸೂಸುವಿಕೆ: ಯಂತ್ರೋಪಕರಣಗಳ ವೆಚ್ಚದ ಶೇ 50% (ಗರಿಷ್ಟ ರೂ.7.50 ಲಕ್ಷ) |

**ಇಂಧನ ಉಳಿತಾಯ :**

**1. ಇಂಧನ ಉಳಿತಾಯ ಯಂತ್ರೋಕರಣಗಳ ಅಳವಡಿಕೆ:**

| ವರ್ಗ | ಎಲ್ಲಾ ವಲಯಗಳಲ್ಲಿ |
|---|---|
| ಸಾಮಾನ್ಯ | ಈಗಿನ ವಿದ್ಯುತ್‌ನ ಬಳಕೆ ಹಿಂದೆ ಬಳಸಾಗುತ್ತಿದ್ದ ವಿದ್ಯುತ್‌ನ ಶೇ 10% ರಷ್ಟು ಉಳಿತಾಯವಾಗಿದ್ದಲ್ಲಿ: ಶೇ 10% ರಷ್ಟು ಮೂಲ ವೆಚ್ಚ (ಗರಿಷ್ಟ ರೂ.5.00 ಲಕ್ಷ) |
| ಅ.ಸಂ, ಹಿಂ.ವ, ವಿ.ಚೇ, ಮಾ.ಸೈ. ಪ.ಜಾತಿ, ಪ.ವರ್ಗ, ಮಹಿಳೆ | ಈಗಿನ ವಿದ್ಯುತ್‌ನ ಬಳಕೆ ಹಿಂದೆ ಬಳಸಾಗುತ್ತಿದ್ದ ವಿದ್ಯುತ್‌ನ ಶೇ 10% ರಷ್ಟು ಉಳಿತಾಯವಾಗಿದ್ದಲ್ಲಿ: ಶೇ 15% ರಷ್ಟು ಮೂಲ ವೆಚ್ಚ (ಗರಿಷ್ಟ ರೂ.7.50 ಲಕ್ಷ) |

**2. ಅಸಂಪ್ರದಾಯಿಕ ವಿದ್ಯುತ್ ಮೂಲಗಳ ಬಳಕೆ:**

| ವರ್ಗ | ಎಲ್ಲಾ ವಲಯಗಳಲ್ಲಿ |
|---|---|
| ಸಾಮಾನ್ಯ | ಅಸಂಪ್ರದಾಯಿಕ ವಿದ್ಯುತ್ ಮೂಲಗಳನ್ನು ಬಳಸಿದಲ್ಲಿ: ಶೇ 10% ರಷ್ಟು ಮೂಲ ವೆಚ್ಚ (ಗರಿಷ್ಟ ರೂ.5.00 ಲಕ್ಷ) |
| ಅ.ಸಂ, ಹಿಂ.ವ, ವಿ.ಚೇ, ಮಾ.ಸೈ. ಪ.ಜಾತಿ, ಪ.ವರ್ಗ, ಮಹಿಳೆ | ಅಸಂಪ್ರದಾಯಿಕ ವಿದ್ಯುತ್ ಮೂಲಗಳನ್ನು ಬಳಸಿದಲ್ಲಿ: ಶೇ 15% ರಷ್ಟು ಮೂಲ ವೆಚ್ಚ (ಗರಿಷ್ಟ ರೂ.7.50 ಲಕ್ಷ) |

**3. ಕ್ಯಾಪಿಟಿವ್ ವಿದ್ಯುತ್ ಉತ್ಪಾದನಾ ಸಹಾಯಧನ:**

| ವರ್ಗ | ಎಲ್ಲಾ ವಲಯಗಳಲ್ಲಿ |
|---|---|
| ಸಾಮಾನ್ಯ | ಸೌರ ಮತ್ತು ಪವನ ವಿದ್ಯುತ್ ಶಕ್ತಿ ಮೂಲಗಳಿಗೆ ಉತ್ಪಾದಿಸಿದ ವಿದ್ಯುತ್‌ನ ಪ್ರತಿ ಯುನಿಟ್‌ಗೆ ರೂ.0.50 ಪೈಸೆ |
| ಅ.ಸಂ, ಹಿಂ.ವ, ವಿ.ಚೇ, ಮಾ.ಸೈ. ಪ.ಜಾತಿ, ಪ.ವರ್ಗ, ಮಹಿಳೆ | ಸೌರ ಮತ್ತು ಪವನ ವಿದ್ಯುತ್ ಶಕ್ತಿ ಮೂಲಗಳಿಗೆ ಉತ್ಪಾದಿಸಿದ ವಿದ್ಯುತ್‌ನ ಪ್ರತಿ ಯುನಿಟ್‌ಗೆ ರೂ.0.75 ಪೈಸೆ |

**ಯೋಜನಾ ವರದಿ ತಯಾರಿಕಾ ವೆಚ್ಚದ ಮರುಪಾವತಿ :**

ಬ್ಯಾಂಕ್‌ಗಳು ಸಾಲ ಮಂಜೂರು ಮಾಡಿದ ಸಿಡಾಕ್ ಅಥವಾ ಟೆಕ್ಸಾಕ್ ನಿಂದ ಸಿದ್ಧಪಡಿಸಲಾದ ಯೋಜನಾ ವರದಿಯ ವೆಚ್ಚ

| ವರ್ಗ | ಹೈ–ಕರ್ನಾಟಕ ಅಲ್ಲದ ಪ್ರದೇಶ (ವಲಯ1, 2 & 3 ಮಾತ್ರ) ಹಾಗೂ ಹೈ–ಕರ್ನಾಟಕ ಪ್ರದೇಶ (ವಲಯ 1 &2) |
|---|---|
| ಸಾಮಾನ್ಯ | ಇಲ್ಲ |
| ಅ.ಸಂ, ಹಿಂ.ವ, ವಿ.ಚೇ, ಮಾ.ಸೈ. ಪ.ಜಾತಿ, ಪ.ವರ್ಗ, ಮಹಿಳೆ | ಯೋಜನಾ ವರದಿ ತಯಾರಿಕೆಯ ವೆಚ್ಚದ ಶೇ 75%–ಗರಿಷ್ಟ ರೂ.2.00 ಲಕ್ಷಗಳು |

## ವ್ಯಾಖ್ಯಾನಗಳು

- ಅತಿಸಣ್ಣ ಉದ್ಯಮಗಳು (ಉತ್ಪಾದನೆ) – ಯಂತ್ರೋಪಕರಣ ಮತ್ತು ಸ್ಥಾವರದಲ್ಲಿ : ರೂ. 25 ಲಕ್ಷಗಳವರೆಗೆ ಹೂಡಿಕೆ
- ಅತಿಸಣ್ಣ ಉದ್ಯಮಗಳು (ಸೇವೆ) – ಯಂತ್ರೋಪಕರಣ ಮತ್ತು ಸ್ಥಾವರದಲ್ಲಿ : ರೂ. 10 ಲಕ್ಷಗಳವರೆಗೆ ಹೂಡಿಕೆ
- ಸಣ್ಣ ಉದ್ಯಮಗಳು (ಉತ್ಪಾದನೆ) – ಯಂತ್ರೋಪಕರಣ ಮತ್ತು ಸ್ಥಾವರದಲ್ಲಿ : ರೂ. 25 ಲಕ್ಷಗಳಿಂದ ರೂ. 500 ಲಕ್ಷಗಳವರೆಗೆ ಹೂಡಿಕೆ
- ಸಣ್ಣ ಉದ್ಯಮಗಳು (ಸೇವೆ) – ಯಂತ್ರೋಪಕರಣ ಮತ್ತು ಸ್ಥಾವರದಲ್ಲಿ : ರೂ. 10 ಲಕ್ಷಗಳಿಂದ ರೂ. 200 ಲಕ್ಷಗಳವರೆಗೆ ಹೂಡಿಕೆ
- ಮಧ್ಯಮ ಉದ್ಯಮಗಳು (ಉತ್ಪಾದನೆ) – ಯಂತ್ರೋಪಕರಣ & ಸ್ಥಾವರದಲ್ಲಿ : ರೂ. 500 ಲಕ್ಷಗಳಿಂದ ರೂ. 1000 ಲಕ್ಷಗಳವರೆಗೆ ಹೂಡಿಕೆ
- ಮಧ್ಯಮ ಉದ್ಯಮಗಳು (ಸೇವೆ) – ಯಂತ್ರೋಪಕರಣ ಮತ್ತು ಸ್ಥಾವರದಲ್ಲಿ : ರೂ. 200 ಲಕ್ಷಗಳಿಂದ ರೂ. 500 ಲಕ್ಷಗಳವರೆಗೆ ಹೂಡಿಕೆ

## ಪ್ರೋತ್ಸಾಹ ಮತ್ತು ರಿಯಾಯಿತಿಗಳ ಮಂಜೂರಾತಿಗೆ ಇರುವ ನಿಭಂದನೆಗಳು ಮತ್ತು ಷರತ್ತುಗಳು:

1. ಈ ನೀತಿಯಲ್ಲಿನ ಪ್ರೋತ್ಸಾಹಗಳು ಮತ್ತು ರಿಯಾಯಿತಿಗಳು ಕೇವಲ ಉತ್ಪಾದನಾ ಚಟುವಟಿಕೆ ಇರುವ ಕೈಗಾರಿಕೆಗಳಿಗೆ ಮತ್ತು ಅನುಬಂಧ–1 ರಲ್ಲಿ ನೀಡಲಾಗಿರುವ ಸೇವಾ ಚಟುವಟಿಕೆಗಳಿಗೆ ಮಾತ್ರ ಲಭ್ಯವಾಗುತ್ತವೆ.
2. ಈ ನೀತಿಯಲ್ಲಿನ ಪ್ರೋತ್ಸಾಹಗಳು ಮತ್ತು ರಿಯಾಯಿತಿಗಳು ಈ ಕೈಗಾರಿಕಾ ನೀತಿಯ ಅವಧಿಯಲ್ಲಿ ಹೊಸ, ವಿಸ್ತರಣೆ, ಆಧುನೀಕರಣ ಮತ್ತು ವೈರುದ್ಧೀಕರಣ ಕಾರ್ಯಕ್ರಮಗಳಿಗಾಇ ಹೂಡಲಾದ ಹೊಸ ಮತ್ತು ಹೆಚ್ಚುವರಿ ಬಂಡವಾಳಕ್ಕೆ ಮಾತ್ರ ಲಭ್ಯವಾಗುತ್ತವೆ.
3. ಘಟಕಗಳು ಅರ್ಹವಿರುವ ಸ್ಥಿರಾಸ್ತಿ ಮೇಲೆ ಕನಿಷ್ಠ ಶೇ 50% ರಷ್ಟು ಅವಧಿ ಸಾಲವನ್ನು ಹಣಕಾಸು ಸಂಸ್ಥೆಗಳಿಂದ / ಬ್ಯಾಂಕ್‌ಗಳಿಂದ ಪಡೆದಿದ್ದಲ್ಲಿ ಮಾತ್ರ ಬಂಡವಾಳ ಹೂಡಿಕೆ ಸಹಾಯಧನವನ್ನು ಪಡೆಯಲು ಅರ್ಹತೆಯನ್ನು ಹೊಂದುತ್ತವೆ. ಅಂತಹ ಘಟಕಗಳು ಉತ್ಪಾದನೆ ಪ್ರಾರಂಭಿಸಿದ ದಿನಾಂಕದಿಂದ ಒಂದು ವರ್ಷದ ಅವಧಿಯೊಳಗೆ ಸಹಾಯಧನ ಮಂಜೂರಾತಿಗೆ ಅರ್ಜಿಯನ್ನು ಸಲ್ಲಿಸಬೇಕಾಗುತ್ತದೆ.
4. ತೆರಿಗೆ ಆಧಾರಿತ ಪ್ರೋತ್ಸಾಹ ಮತ್ತು ರಿಯಾಯಿತಿಗಳಿಗೆ ಸಾಲ ಪಡೆಯಲು ಯಾವುದೇ ಮಿತಿ ಇರುವುದಿಲ್ಲ. ಸ್ವಂತ ಬಂಡವಾಳ ಹೂಡಿದ ಘಟಕಗಳು ಸಹ ತೆರಿಗೆ ಆಧಾರಿತ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ಪಡೆಯಬಹುದಾಗಿವೆ.

## ಅನುಬಂಧ–1: ಪ್ರೋತ್ಸಾಹಗಳು ಮತ್ತು ರಿಯಾಯಿತಿಗಳಿಗೆ ಅರ್ಹವಿರುವ ಸೇವಾ ಚಟುವಟಿಕೆಗಳು / ಘಟಕಗಳು

1. ಕೈಗಾರಿಕೆಗಳಿಗೆ ಬೆಂಬಲ ಸೇವೆ ನೀಡುವ ಲಾಜಿಸ್ಟಿಕ್ ಫೆಸಲಿಟಿಗಳು
   ಎ). ಕಂಟೇನರ್ ಫ್ರೈಟ್ ಸ್ಟೇಷನ್ ಆಪರೇಟರ್ಸ್,
   ಬಿ). ವೇರ್‌ಹೌಸಸ್,
   ಸಿ). ಆಹಾರ ಸಂಸ್ಕರಣೆ ಕೈಗಾರಿಕೆಗೆ ಇಕ್ವಿಪ್‌ಮೆಂಟ್ ಬೆಂಬಲ ನೀಡುವ ಶೈತ್ಯಾಗಾರಗಳು ಮತ್ತು ಇದೇ ರೀತಿಯ ಸೌಕರ್ಯಗಳು
   ಡಿ). ಮೆಟೀರಿಯಲ್ ಹ್ಯಾಂಡ್ಲಿಂಗ್ ಎಕ್ವಿಪ್‌ಮೆಂಟ್ (ರವಾನೆ ಸಾರಿಗೆ ಮತ್ತು ಗೂಡ್ಸ್ ಕ್ಯಾರಿಯರ್‌ಗಳನ್ನು ಹೊರತುಪಡಿಸಿ)
2. ಜಾಬ್‌ವರ್ಕ್‌ನಲ್ಲಿ ನಿರತರಾಗಿರುವ ಪೌಡರ್‌ಕೋಟಿಂಗ್ / ಪೆಯಿಂಟಿಂಗ್, ಕೈಗಾರಿಕಾ ಪೆಯಿಂಟಿಂಗ್‌ಗಳು ಇತ್ಯಾದಿ.
3. ಕೆ.ಐ.ಎ.ಡಿ.ಬಿ/ ಕೆ.ಎಸ್.ಎಸ್.ಐ.ಡಿ.ಸಿ ಕೈಗಾರಿಕಾ ಪ್ರದೇಶಗಳು/ ನಿವೇಶನಗಳ ಒಳಗೆ ಸ್ಥಾಪಿಸಲಾಗುವ ವೇ ಬ್ರಿಡ್ಜ್‌ಗಳು ಮತ್ತು ಹೆಲ್ತ್‌ಕೇರ್ ಫೆಸಿಲಿಟಿಗಳು.
4. ಮೆಟಿರಿಯಲ್/ಪ್ರಾಡಕ್ಟ್ ಟೆಸ್ಟಿಂಗ್ ಲ್ಯಾಬರೇಟರಿ.
5. ಹಿಟ್ಟಿನ ಗಿರಣಿಗಳು
6. ಟೈಲರಿಂಗ್
7. ಎಲ್ಲಾ ತರಹದ ಮುದ್ರಣ
8. ಜನರಲ್ ಇಂಜಿನಿಯರಿಂಗ್, ಫ್ಯಾಬ್ರಿಕೇಶನ್, ಮೋಟಾರ್ ರಿವೈಂಡಿಂಗ್, ಆಟೋಮೊಬೈಲ್ ಸರ್ವಿಸಿಂಗ್, ಎಲೆಕ್ಟ್ರೋಪ್ಲೇಟಿಂಗ್ ಇತ್ಯಾದಿ.
9. ಎಲ್ಲಾ ತರಹದ ಮೈನ್‌ಟೆನೆನ್ಸ್ ಮತ್ತು ಎಕ್ವಿಪ್‌ಮೆಂಟ್‌ಗಳ ರಿಪೇರಿ

## ಅನುಬಂಧ–2: ಪ್ರೋತ್ಸಾಹಗಳು ಮತ್ತು ರಿಯಾಯಿತಿಗಳಿಗೆ ಅರ್ಹವಲ್ಲದ ಕೈಗಾರಿಕಾ ಚಟುವಟಿಕೆಗಳು / ಘಟಕಗಳು

1. ವೈನರಿಯನ್ನು ಹೊರತುಪಡಿಸಿ ಎಲ್ಲಾ ತರಹದ ಬ್ರುವರಿಗಳು ಮತ್ತು ಡಿಸ್ಟಿಲರಿಗಳು
2. ಖಂಡಸಾರಿ ಮತ್ತು ಬೆಲ್ಲ ತಯಾರಿಸುವ ಘಟಕಗಳು
3. ಫೋಟೋ ಸ್ಟುಡಿಯೋ ಮತ್ತು ವರ್ಣ ಸಂಸ್ಕರಣಾ ಮತ್ತು ಕ್ಷಣಮಾತ್ರದಲ್ಲಿ ಫೋಟೋ ಮುದ್ರಣ ಮಾಡುವ ಘಟಕಗಳು
4. ಫೋಟೋ ನಕಲು/ ಜೆರಾಕ್ಸ್/ ಫ್ಯಾಕ್ಸ್/ ಡಾಟಾ ಎಂಟ್ರಿ/ ಡಾಟಾ ರಿಕವರಿ ಘಟಕಗಳು
5. ಗೊಬ್ಬರ ಮಿಶ್ರಣ ಮಾಡುವ ಘಟಕಗಳು
6. ಔಷಧಗಳನ್ನು/ ರಸಾಯನಿಕಗಳನ್ನು ಯಾವುದೇ ಮೌಲ್ಯವರ್ಧನೆ ಮಾಡದೇ ರೀಪ್ಯಾಕ್ ಮಾಡುವ ಘಟಕಗಳು
7. ಪಾರ್ಟಿಕಲ್ ಬೋರ್ಡ್ /ಕಡಿಮೆ ಸಾಂದ್ರತೆಯ ಫೈಬರ್ ಬೋರ್ಡ್ (ಎಲ್.ಡಿ.ಎಫ್), ಮಧ್ಯಮ ಸಾಂದ್ರತೆಯ ಫೈಬರ್ ಬೋರ್ಡ್ (ಎಂ.ಡಿ.ಎಫ್)/ ಅಧಿಕ ಸಾಂದ್ರತೆಯ ಫೈಬರ್ ಬೋರ್ಡ್ (ಹೆಚ್.ಡಿ.ಎಫ್) ಹೊರತುಪಡಿಸಿ ಎಲ್ಲಾ ತರಹದ ಸಾಮಿಲ್‌ಗಳು
8. ಬೀಡಿ/ ಸಿಗರೇಟ್/ ಸಿಗಾರ್/ ಗುಟ್ಕ ಮತ್ತು ತಂಬಾಕು ಉತ್ಪನ್ನಗಳನ್ನು ತಯಾರಿಸುವ ಘಟಕಗಳು.
9. ಅಜೋಯಿಕ್/ ರಿಯಾಕ್ಟಿವ್ ಬಣ್ಣಗಳನ್ನು ತಯಾರಿಸುವ ಘಟಕಗಳು
10. ಪಟಾಕಿಗಳನ್ನು ತಯಾರಿಸುವ ಘಟಕಗಳು
11. ಓಜೋನ್ ಪದರವನ್ನು ಹಾಳುಮಾಡುವ ಉತ್ಪನ್ನಗಳನ್ನು ತಯಾರಿಸುವ / ಬಳಸುವ ಕೈಗಾರಿಕೆಗಳು

12. ಪವರ್ ಲಾಂಡ್ರಿಗಳನ್ನು ಸೇರಿ ಇತರೆ ಲಾಂಡ್ರಿಗಳು
13. ಸಿಮೆಂಟ್ ಬ್ರಿಕ್, ಸಿಮೆಂಟ್ ಹ್ಯಾಲೋಬ್ಲಾಕ್, ವೈರ್‌ಕಟ್ ಇಟ್ಟಿಗೆ, ಹಾರುಬೂದಿ ಇಟ್ಟಿಗೆ ಮತ್ತು ರಿಫ್ರಾಕ್ಟರಿ ಇಟ್ಟಿಗೆಗಳನ್ನು ಹೊರತುಪಡಿಸಿ ಇತರೆ ಇಟ್ಟಿಗೆಗಳನ್ನು ತಯಾರಿಸುವ ಘಟಕಗಳು
14. ಹ್ಯಾಚರಿಗಳನ್ನು ಹೊರತುಪಡಿಸಿ ಕೋಳಿ ಸಾಕಾಣಿಕೆ ಘಟಕಗಳು
15. ಐಸ್‌ಕ್ರೀಮ್ ತಯಾರಿಸುವ ಘಟಕಗಳನ್ನು ಹೊರತುಪಡಿಸಿ ಪಾಪ್‌ಕಾರ್ನ್ ಮತ್ತು ಐಸ್‌ಕ್ಯಾಂಡಿ ತಯಾರಿಸುವ ಘಟಕಗಳು
16. ಪ್ರತಿದಿನ 2 ಮೆ.ಟನ್‌ಗಿಂದ ಕಡಿಮೆ ಸಾಮರ್ಥ್ಯ ಹೊಂದಿರುವ ಕಾಫಿ ರೋಸ್ಟಿಂಗ್ ಮತ್ತು ಗ್ರೈಂಡಿಂಗ್ ಘಟಕಗಳು
17. ಗಡಿಯಾರಗಳು ಮತ್ತು ವಾಚ್/ಮೊಬೈಲ್/ಗಣಕ ಮತ್ತು ಅದರ ಯಂತ್ರಗಳ ದುರಸ್ತಿ ಘಟಕಗಳು
18. ಶ್ರವಣ ಮತ್ತು ದೃಶ್ಯ ಮಾಧ್ಯಮದಕ್ಯಾಸೆಟ್ ರಿಕಾರ್ಡಿಂಗ್
19. ಸಯನೈಡ್ ತಯಾರಿಕಾ ಘಟಕಗಳು
20. ಗಣಿ ಮತ್ತು ಗಣಿ ಯಂತ್ರೋಪಕರಣಗಳು
21. ಲೈಮದ ಕಿಲನ್/ ಸುಟ್ಟ ಲೈಮ್ ಘಟಕಗಳು
22. ಎಕ್ಸ್–ರೇ ಕ್ಲಿನಿಕ್‌ಗಳು ಮತ್ತು ಕ್ಲಿನಿಕಲ್ /ಪ್ಯಾಥಲಾಜಿಕಲ್ ಲ್ಯಾಬ್‌ಗಳು ಮತ್ತು ಸ್ಕ್ಯಾನಿಂಗ್, ಎಂ.ಆರ್.ಐ ಪರೀಕ್ಷಾ ಘಟಕಗಳು
23. ಕೊಳವೆಬಾವಿ ಕೊರೆಯುವ ಯಂತ್ರಗಳು, ಕಾಂಕ್ರಿಟ್ / ಟಾರ್ ಮಿಶ್ರಣ ಮಾಡುವ ಘಟಕಗಳು/ ಹಾಟ್ ಮಿಕ್ಸ್ ಘಟಕಗಳು (ಸ್ಥಿರ ಮತ್ತು ಚಲನ ಘಟಕಗಳು)
24. ಕ್ರಿಸ್ಟಲ್ ಅಸ್ಟೆಸ್ಟಸ್ ತಯಾರಿಸುವ ಘಟಕಗಳು
25. ಎಲ್ಲಾ ತರಹದ ಸಲೂನ್‌ಗಳು/ ಸ್ಪಾಗಳು/ ಮಸಾಜ್ ಕೇಂದ್ರಗಳು ಇತ್ಯಾಧಿ
26. ಎಲ್ಲಾ ತರಹದ ಹೊಟೆಲ್‌ಗಳು/ ರೆಸ್ಟಾರೆಂಟ್‌ಗಳು/ ಅಮ್ಯೂಸಮೆಂಟ್ ಪಾರ್ಕ್‌ಗಳು ಇತ್ಯಾದಿ

## ಸೂಕ್ಷ್ಮ ಹಾಗೂ ಸಣ್ಣ ಉದ್ಯಮಗಳ ಕ್ಲಸ್ಟರ್ ಅಭಿವೃದ್ಧಿ ಯೋಜನೆ

- ಭಾರತ ಸರ್ಕಾರದ ಕ್ಲಸ್ಟರ್ ಅಭಿವೃದ್ಧಿ ಯೋಜನೆಯು ಒಂದು ಸ್ಥಳದಲ್ಲಿ ಒಂದೇ ತರಹದ ಉತ್ಪಾದನಾ ಚಟುವಟಿಕೆಗಳಲ್ಲಿ ತೊಡಗಿರುವ ಸೂಕ್ಷ್ಮ ಹಾಗೂ ಸಣ್ಣ ಕೈಗಾರಿಕೆಗಳನ್ನು ಗುರುತಿಸಿ ಚಟುವಟಿಕೆಗೆ ಅವಶ್ಯವಿರುವ ಸಾಮೂಹಿಕ ಸೌಲಭ್ಯ ಕೇಂದ್ರವನ್ನು ಸ್ಥಾಪಿಸಿ ಅಗತ್ಯವಿರುವ ಸೇವಾ ಸೌಲಭ್ಯಗಳನ್ನು ಪಡೆಯುವ ಕಾರ್ಯಕ್ರಮವಾಗಿರುತ್ತದೆ.
- ರಾಜ್ಯದಲ್ಲಿ ಈ ಯೋಜನೆಯ ಅನುಷ್ಠಾನಕ್ಕಾಗಿ ಕರ್ನಾಟಕ ತಾಂತ್ರಿಕ ಉನ್ನತೀಕರಣ ಪರಿಷತ್ತು ಸಂಸ್ಥೆಯು ನೋಡಲ್ ಏಜೆನ್ಸಿಯಾಗಿ ಕಾರ್ಯನಿರ್ವಹಿಸುತ್ತಿದೆ.

**ಯೋಜನೆಯ ವಿವರಗಳು.**

ಸಣ್ಣ ಕೈಗಾರಿಕೆಗಳ ಕ್ಲಸ್ಟರ್ ಚಟುವಟಿಕೆ ಅಭಿವೃದ್ಧಿ ಯೋಜನೆಯಡಿ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಮತ್ತು ಸ್ಪೆಷಲ್ ಪರ್ಪಸ್ ವೆಹಿಕಲ್ (ಎಸ್‌ಪಿವಿ) ಒಂದುಗೂಡಿ ಒಂದೇ ರೀತಿಯ ಚಟುವಟಿಕೆಯುಳ್ಳ ಕೈಗಾರಿಕೆಗಳನ್ನು, ಒಂದೇ ಸ್ಥಳದಲ್ಲಿ ಅಭಿವೃದ್ಧಿಪಡಿಸಲು ಹಾಗೂ ಉತ್ಪಾದನೆ ಮೌಲ್ಯ ಹೆಚ್ಚಿಸಲು ಬೇಕಾಗುವ ಸಾಮೂಹಿಕ ಕಾರ್ಯಾಗಾರ ಮತ್ತು ಇತರೆ ಸೌಲಭ್ಯಗಳನ್ನು ಅಳವಡಿಸಲು ಹಣಕಾಸು ನೆರವು ನೀಡಲಾಗುವುದು. ಕ್ಲಸ್ಟರ್ ಅಭಿವೃದ್ಧಿ ಯೋಜನೆಯಡಿ ಕನಿಷ್ಠ 20 ಸದಸ್ಯ ಎಂಎಸ್ಇ ಘಟಕಗಳು ಎಸ್‌ಪಿವಿಯನ್ನು ರಚಿಸಿ ನೋಂದಾಯಿಸಿಕೊಂಡಿರತಕ್ಕದ್ದು. ಈ ಯೋಜನೆಯಲ್ಲಿ ಮೂರು ಹಂತಗಳಿರುತ್ತವೆ.

- ವಿಶ್ಲೇಷಣಾ ವರದಿ ತಯಾರಿಕೆ
- ಸಾಫ್ಟ್ ಇಂಟರ್‌ವೆನ್ಷನ್
- ವಿಸ್ತೃತ ಯೋಜನಾ ವರದಿ ತಯಾರಿಕೆ

- ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ಸಂಪೂರ್ಣ ಅನುದಾನವನ್ನು ಕೇಂದ್ರ ಹಾಗೂ ಎಸ್‌ಪಿವಿ ಸಂಸ್ಥೆಗಳು ಭರಿಸುತ್ತವೆ.
- ಯಂತ್ರೋಪಕರಣಗಳಿಗಾಗಿ ಕೆಸಿಟಿಯು ಸಂಸ್ಥೆಯು ಯೋಜನೆ ಅನುಷ್ಠಾನಕ್ಕಾಗಿ ಎಸ್‌ಪಿವಿಗೆ ಬಿಡುಗಡೆ ಮಾಡುವುದು.

**ರಾಜ್ಯಮಟ್ಟದ ಆಯ್ಕೆ ಸಮಿತಿ :**

ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ಈ ಯೋಜನೆ ಅನುಷ್ಠಾನ ಕುರಿತು ರಾಜ್ಯದಲ್ಲಿ ಕೈಗಾರಿಕಾಭಿವೃದ್ಧಿ ಆಯುಕ್ತರು ಮತ್ತು ನಿರ್ದೇಶಕರು ಕೈವಾಇ ರವರು ಅಧ್ಯಕ್ಷರಾಗಿ ಹಾಗೂ ವ್ಯವಸ್ಥಾಪಕ ನಿರ್ದೇಶಕರು, ಕೆಸಿಟಿಯು ರವರನ್ನು ಸದಸ್ಯ ಕಾರ್ಯದರ್ಶಿಯಾಗಿ ಸಂಬಂಧಪಟ್ಟ ವಿವಿಧ ಇಲಾಖೆಗಳ ಅಧಿಕಾರಿಗಳ 10 ಸದಸ್ಯರುಗಳನ್ನೊಳಗೊಂಡ ಸ್ಟೀರಿಂಗ್ ಕಮಿಟಿಯನ್ನು ಸರ್ಕಾರದ ಆದೇಶ ಸಂ: ಸಿಐ 82 ಸಪ್ರಕೈ 2011, ಬೆಂಗಳೂರು ದಿನಾಂಕ: 13.04.2011 ರಲ್ಲಿ ರಚಿಸಲಾಗಿದೆ. ಸಮಿತಿಯ ಕಾರ್ಯವ್ಯಾಪ್ತಿಯಂತೆ ರಾಜ್ಯದಲ್ಲಿ ಸ್ವೀಕೃತವಾಗುವ ಕ್ಲಸ್ಟರ್‌ಗಳ ಪ್ರಸ್ತಾವನೆಯನ್ನು ಸಮಿತಿಯ ಅನುಮೋದನೆ ಪಡೆದು ಕೇಂದ್ರ ಸರ್ಕಾರಕ್ಕೆ ಡಿಎಸ್‌ಆರ್ ತಯಾರಿಕೆಗಾಗಿ ನಿಗಧಿತ ನಮೂನೆಯಲ್ಲಿ ಅನುಮೋದನೆಗೆ ರಾಜ್ಯದ ಸಂಬಂಧಿಸಿದ ಎಂಎಸ್‌ಎಂಇ–ಡಿಐ ಕಚೇರಿಗೆ ಶಿಫಾರಸ್ಸು ಮಾಡಲಾಗುವುದು.

## Hard Interventions (setting up of CFCs):

ಕ್ಲಸ್ಟರ್ ಅಭಿವೃದ್ಧಿ ಯೋಜನೆಯಡಿ ಸಾಮೂಹಿಕ ಸೌಲಭ್ಯ ಕೇಂದ್ರದ ಸ್ಥಾಪನೆಗೆ ಒಟ್ಟು ಕೇಂದ್ರ ಸರ್ಕಾರದ ವಂತಿಕೆ ಮಿತಿ ಶೇಕಡ 70 ರಷ್ಟು ಇದ್ದು ಗರಿಷ್ಠ ಯೋಜನಾ ಮೊತ್ತ ರೂ.15.00 ಕೋಟಿಗಳಾಗಿರುತ್ತದೆ. ಕೇಂದ್ರ ಸರ್ಕಾರದ ವಂತಿಕೆಯು (ಅ) ಸೂಕ್ಷ್ಮ/ಗ್ರಾಮೀಣ ಕೈಗಾರಿಕೆ (ಆ) ಮಹಿಳಾ ಮಾಲಿಕತ್ವದ ಘಟಕಗಳು (ಇ) ಪರಿಶಿಷ್ಟ ಜಾತಿ/ಪಂಗಡ ಆಗಿದ್ದಲ್ಲಿ ಶೇಕಡ 90 ರಷ್ಟು ಲಭ್ಯವಿರುತ್ತದೆ. ಯೋಜನೆಯ ಅಂಶವಾಗಿರುವ ಭೂಮಿಯ

ಗರಿಷ್ಠ ವೆಚ್ಚವು ಒಟ್ಟು ಯೋಜನಾ ವೆಚ್ಚದ ಶೇಕಡ 25 ರಷ್ಟಿರಬೇಕು. ಸಾಮೂಹಿಕ ಸೌಲಭ್ಯ ಕೇಂದ್ರದ ಭೂಮಿ ಖರೀದಿ ಮತ್ತು ಕಟ್ಟಡದ ಸಂಪೂರ್ಣ ವೆಚ್ಚವನ್ನು ಸಂಬಂಧಿಸಿದ ಎಸ್‌ಪಿವಿ / ರಾಜ್ಯ ಸರ್ಕಾರ ಭರಿಸಬೇಕಾಗಿರುತ್ತದೆ.

ಎಂಎಸ್‌ಎಂಇ ಮಂತ್ರಾಲಯದ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ರಚಿಸಿರುವ ಸ್ಟೀರಿಂಗ್ ಕಮಿಟಿಯು ಯೋಜನೆಗೆ ಎರಡು ಹಂತಗಳಲ್ಲಿ ಅನುಮೋದನೆಯನ್ನು ನೀಡುತ್ತದೆ.

1) ತಾತ್ವಿಕ ಅನುಮೋದನೆ 2) ಅಂತಿಮ ಅನುಮೋದನೆ.

ಎಸ್‌ಪಿವಿಯು ತಾತ್ವಿಕ ಅನುಮೋದನೆಯಲ್ಲಿ ವಿಧಿಸಿರುವ ಎಲ್ಲಾ ಷರತ್ತು ಹಾಗೂ ನಿಬಂಧನೆಗಳನ್ನು ಪಾಲನೆ ಮಾಡಿದ ನಂತರ ಹಾಗೂ SIDBI appraisal ಆದನಂತರ ಅಂತಿಮ ಅನುಮೋದನೆಯನ್ನು ಕೇಂದ್ರ ಸರ್ಕಾರದಿಂದ ನೀಡಲಾಗುವುದು

**ಅನುದಾನ ಬಿಡುಗಡೆ:**

ಒಟ್ಟು ಯೋಜನಾ ವೆಚ್ಚದಲ್ಲಿ ಕೇಂದ್ರ ಸರ್ಕಾರದ ಅನುದಾನವನ್ನು ಹೊರತುಪಡಿಸಿ ಉಳಿದ ಮೊತ್ತದಲ್ಲಿ ಎಸ್‌ಪಿವಿ ಹಾಗೂ ರಾಜ್ಯ ಸರ್ಕಾರದ ವಂತಿಕೆಯು ತಲಾ ಶೇಕಡ 50 ರಷ್ಟಾಗಿರುತ್ತದೆ.

ಅ) **ಎಸ್‌ಪಿವಿ ವಂತಿಕೆ** :

ಅನುಮೋದಿತ ಹಣಕಾಸಿನ ಮೂಲಗಳ ಯೋಜನಾ ವೆಚ್ಚದಂತೆ ಎಸ್‌ಪಿವಿಯ ಪಾಲಿನ ವಂತಿಕೆಯನ್ನು ಕೆಸಿಟಿಯುನಲ್ಲಿ ಯೋಜನೆಯ ಅನುಷ್ಠಾನಕ್ಕಾಗಿ ತೆರೆಯುವ ಪ್ರತ್ಯೇಕ ನೋ-ಲೀನ್ ಖಾತೆಗೆ ಸಂಪೂರ್ಣವಾಗಿ ಜಮಾ ಮಾಡುವುದು. ಈ ಅನುದಾನವನ್ನು ಅವಶ್ಯಕತೆಗನುಗುಣವಾಗಿ ಭೂಮಿ, ಕಟ್ಟಡ ಮತ್ತು

ಆ) **ರಾಜ್ಯದ ಅನುದಾನ** :

ಯೋಜನೆಗೆ ಕೇಂದ್ರ ಸರ್ಕಾರವು ಅಂತಿಮ ಅನುಮೋದನೆ ನೀಡಿದ ನಂತರ ಎಸ್‌ಪಿವಿಯು ತನ್ನ ಪಾಲಿನ ವಂತಿಕೆಯನ್ನು ಕೆಸಿಟಿಯು ಸಂಸ್ಥೆಯ ಬ್ಯಾಂಕಿನಲ್ಲಿ ತೆರದಿರುವ ನೋ ಲೀನ್ ಖಾತೆಗೆ ಜಮಾ ಮಾಡಿ ಅಂತಿಮ ಅನುಮೋದನೆಯಲ್ಲಿ ನೀಡಿರುವ ಷರತ್ತುಗಳನ್ನು ಪಾಲನೆ ಮಾಡಿದ ನಂತರ ಈಗಾಗಲೇ ಒಪ್ಪಿಗೆ ನೀಡಿರುವಂತೆ ರಾಜ್ಯ ಸರ್ಕಾರದ ಪಾಲಿನ ವಂತಿಕೆಯನ್ನು ಮಂಜೂರು ಮಾಡಿ ಕೆಸಿಟಿಯು ಸಂಸ್ಥೆಗೆ ಬಿಡುಗಡೆ ಮಾಡಲಾಗುತ್ತದೆ. ಈ ಅನುದಾನವನ್ನು ಅವಶ್ಯಕತೆಗನುಗುಣವಾಗಿ ಭೂಮಿ, ಕಟ್ಟಡ ಮತ್ತು ಯಂತ್ರೋಪಕರಣಗಳಿಗಾಗಿ ಕೆಸಿಟಿಯು ಸಂಸ್ಥೆಯು ಯೋಜನೆ ಅನುಷ್ಠಾನಕ್ಕಾಗಿ ಎಸ್‌ಪಿವಿಗೆ ಬಿಡುಗಡೆ ಮಾಡತಕ್ಕದ್ದು.

ಇ) **ಕೇಂದ್ರದ ಅನುದಾನ** :

ಎಸ್‌ಪಿವಿಯು ಕೇಂದ್ರ ಸರ್ಕಾರದ ಅಂತಿಮ ಅನುಮೋದನೆ ಆದೇಶ ಪಾಲನೆ ಷರತ್ತುಗಳು ಹಾಗೂ ತನ್ನ ಪಾಲಿನ ವಂತಿಕೆಯನ್ನು ನೋ ಲೀನ್ ಖಾತೆಗೆ ಜಮಾ ಮಾಡಿದ ನಂತರ ರಾಜ್ಯದ ಪಾಲಿನ ವಂತಿಕೆ / ಅನುದಾನ ಬಿಡುಗಡೆಗಾಗಿ ಪ್ರಗತಿ ವರದಿಯೊಂದಿಗೆ ವಿವರವಾದ ಪ್ರಸ್ತಾವನೆಯನ್ನು ಆಯಾ ಜಿಲ್ಲಾ ಕೈಗಾರಿಕಾ ಕೇಂದ್ರಗಳ ಜಂಟಿ ನಿರ್ದೇಶಕರು ಶಿಫಾರಸ್ಸನ್ನು ವ್ಯವಸ್ಥಾಪಕ ನಿರ್ದೇಶಕರು, ಕೆಸಿಟಿಯು ಇವರಿಗೆ ಸಲ್ಲಿಸಬೇಕು. ತದನಂತರ ನೋಡಲ್ ಏಜೆನ್ಸಿಯಾದ ಕೆಸಿಟಿಯು ಸಂಸ್ಥೆಯು ಪ್ರಸ್ತಾವನೆಯನ್ನು ಪರಿಶೀಲಿಸಿ ಅಭಿಪ್ರಾಯ ಹಾಗೂ ಶಿಫಾರಸ್ಸಿನೊಡನೆ ಕೇಂದ್ರ ಸರ್ಕಾರದ ವಂತಿಕೆ ಬಿಡುಗಡೆಗೆ ಪ್ರಸ್ತಾವನೆ ಸಲ್ಲಿಸತಕ್ಕದ್ದು.

## 2018-19ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿದ ಹೊಸ ಯೋಜನೆಗಳು

1. ಕುಶಲಕರ್ಮಿಗಳು ಮತ್ತು ಅತಿಸೂಕ್ಷ್ಮ, ಸೂಕ್ಷ್ಮ ಮತ್ತು ಮಧ್ಯಮ ಕೈಗಾರಿಕೆಗಳು ಆರ್ಥಿಕತೆಯ ಬೆನ್ನೆಲುಬಾಗಿದ್ದು ಈ ವಲಯದ ಕೊರತೆಗಳನ್ನು ನೀಗಿಸಲು ರಾಜ್ಯ ಕ್ಲಸ್ಟರ್ ಅಭಿವೃದ್ಧಿ ಕಾರ್ಯಕ್ರಮವನ್ನು ಪ್ರಸ್ತಾಪಿಸಲಾಗುತ್ತಿದ್ದು ಈ ಯೋಜನೆಯಡಿ ಸಾಮಾನ್ಯ ಸೌಲಭ್ಯ ಕೇಂದ್ರಗಳನ್ನು ಸ್ಥಾಪಿಸಲು ಯೋಜನಾ ವೆಚ್ಚದ ಶೇ. 50ರಷ್ಟು ಅಥವಾ ಗರಿಷ್ಠ 5 ಕೋಟಿ ರೂ. ಒದಗಿಸಲಾಗುವುದು.
2. ರಾಜ್ಯದಲ್ಲಿ ಕೆ.ಎಸ್.ಎಫ್.ಸಿ. ವತಿಯಿಂದ ಸಾಲ ಪಡೆಯುವ ರಾಜ್ಯದ ಎಲ್ಲಾ ಸೂಕ್ಷ್ಮ ಮತ್ತು ಸಣ್ಣ ಉತ್ಪಾದನಾ ಕೈಗಾರಿಕೆಗಳನ್ನು ಪ್ರಾರಂಭಿಸುವ ಉದ್ದಿಮೆದಾರರಿಗೆ, ಸಾಲ ಬಿಡುಗಡೆಗೊಂಡ ದಿನಾಂಕದಿಂದ 5 ವರ್ಷಗಳವರೆಗೆ ಶೇ. 10ರಷ್ಟು ಬಡ್ಡಿ ಸಹಾಯಧನವನ್ನು ನೀಡಲಾಗುವುದು.
3. ಸೂಕ್ಷ್ಮ ಮತ್ತು ಸಣ್ಣ ತೆಂಗಿನನಾರಿನ ಕೈಗಾರಿಕೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕೌಶಲ್ಯ ಕಾರ್ಮಿಕರಿಗೆ ವಾರ್ಷಿಕ ರೂ.10,000 ಪ್ರೋತ್ಸಾಹಧನ.
4. ಸೂಕ್ಷ್ಮ ಮತ್ತು ಸಣ್ಣ ತೆಂಗಿನನಾರಿನ ಕೈಗಾರಿಕೆಗಳಿಗೆ, ತೆಂಗಿನನಾರಿನ ಪ್ರಾಥಮಿಕ ಸಹಕಾರ ಸಂಘಗಳಿಗೆ ಶೇ 10% ರಷ್ಟು ಮಾರುಕಟ್ಟೆ ಅಭಿವೃದ್ಧಿ ಸಹಾಯಧನ
5. ಭೌಗೋಳಿಕ ಗುರುತು ಹೊಂದಿರುವ ಉತ್ಪನ್ನಗಳ / ಚಟುವಟಿಕೆಗಳ ಕ್ಲಷ್ಟರ್ ಅಭಿವೃದ್ಧಿ ಮತ್ತು ಅವುಗಳ ಉತ್ತೇಜನಕ್ಕೆ ವಿವಿಧ ಪ್ರೋತ್ಸಾಹಗಳು.
6. ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯಿಂದ ಸಾಲ ಪಡೆದ ಬಿ.ಪಿ.ಎಲ್ ಫಲಾನುಭವಿಗಳ ಸಾಲ ಮತ್ತು ಬಡ್ಡಿ ಮನ್ನಾ.

## ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:

1. ನಿಮ್ಮ ಜಿಲ್ಲೆಯ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ
2. ನಿಮ್ಮ ಜಿಲ್ಲೆಯ ಉಪ ನಿರ್ದೇಶಕರು (ಖಾಗ್ರಾ), ಜಿಲ್ಲಾ ಪಂಚಾಯತ್ ಕೈಗಾರಿಕಾ ವಿಭಾಗ
3. ನಿಮ್ಮ ಉಪ ವಿಭಾಗದ ಸಹಾಯಕ ನಿರ್ದೇಶಕರು, ತಾಲ್ಲೂಕು ಕೈಗಾರಿಕಾ ಕೇಂದ್ರ
4. ನಿಮ್ಮ ತಾಲ್ಲೂಕಿನ ಕೈಗಾರಿಕಾ ವಿಸ್ತರಣಾಧಿಕಾರಿ